ಸಂಪುಟ 01 | ಸಂಚಿಕೆ 140 | ಸೋಮವಾರ 24 ಆಗಸ್ಟ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707586, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ವಾಫಲ್ ದಿನ (National Waffle Day): ಅಮೆರಿಕ ಸೇರಿದಂತೆ ಹಲವೆಡೆ ವಾಫಲ್ ತಿಂಡಿಯನ್ನು ವಿಶೇಷವಾಗಿ ತಯಾರಿಸಿ ಆಚ-ರಿಸಲಾಗುತ್ತದೆ.

2) ಅಂತರರಾಷ್ಟ್ರೀಯ ವಿಚಿತ್ರ ಸಂಗೀತ ದಿನ (International Strange Music Day): ಎಂದೂ ಕೇಳರಿಯದ ವಿಭಿನ್ನ ಹಾಗೂ ಅಪರೂಪದ ಸಂಗೀತ ಪ್ರಕಾರಗಳನ್ನು ಆಲಿಸುವ ದಿನ.

## ಸುಭಾಷಿತ

ಹಣ, ಜ್ಞಾನ ಮತ್ತು ಸಮಯ ಇವು ಪ್ರತಿಯೊಬ್ಬರಿಗೂ ಸಿಗುವ ಮೂರು ಕರೆನ್ಸಿಗಳು. ಒಂದನ್ನು ಗಳಿಸಬೇಕಾದರೆ ಮತ್ತೆರಡನ್ನು ಬಳಸಿಕೊಳ್ಳಬೇಕು.

–ವಾರೆನ್ ಬಫೆಟ್

# ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಬಡದಾನಿಗೆ ಗೌರವ ಸತ್ಕಾರ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಮುದ್ದೇಬಿಹಾಳ ಕ್ಷೇತ್ರ ಶಿಕ್ಷಣಾಧಿಕಾರಿಯಾಗಿ ನೂತನವಾಗಿ ಪದಗ್ರಹಣ ಮಾಡಿರುವ ಎಂ.ಎಸ್.ಬಡದಾನಿ ಹಾಗೂ ಕ್ಷೇತ್ರ ಸಮನ್ವಯ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಆರ್.ಬಿ.ದಮ್ಮೂರಮಠ ಇವರನ್ನು ತಾಳಿಕೋಟಿ ತಾಲೂಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ವತಿಯಿಂದ ಶುಕ್ರವಾರ ಸನ್ಮಾನಿಸಿ ಗೌರವಿಸಲಾಯಿತು. ಸಂಘದ ಪದಾಧಿಕಾರಿಗಳ ಸನ್ಮಾನವನ್ನು ಸ್ವೀಕರಿಸಿ ಮಾತನಾಡಿದ ನೂತನ ಬಿಇಓ ಬಡದಾನಿ ಅವರು ಕ್ಷೇತ್ರದಲ್ಲಿರುವ ಎಲ್ಲಾ ಶಾಲೆಗಳು ಇನ್ನೂ ಅತ್ಯುತ್ತಮವಾಗಿ ಕಾರ್ಯ ನಿರ್ವಹಿಸುವಂತಾಗಲು ನನಗೆ ನಿಮ್ಮೆಲ್ಲರ ಸಹಕಾರದ ಅಗತ್ಯವಿದೆ, ಈ ನಿಟ್ಟಿನಲ್ಲಿ ನಾವೆಲ್ಲರೂ ಒಂದಾಗಿ ಕೆಲಸ ಮಾಡೋಣ ಎಂದರು. ಈ ಸಮಯದಲ್ಲಿ ತಾಲೂಕ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರಾದ ಬಿ.ಟಿ.ವಜ್ಜಲ್, ಉಪಾಧ್ಯಕ್ಷ ಟಿ.ಹೆಚ್.ಲಮಾಣಿ, ಪ್ರಧಾನ ಕಾರ್ಯದರ್ಶಿ ಎಸ್.ಬಿ.ಬೀರಗೊಂಡ, ಪತ್ತು ಬೆಳೆಸುವ ಸಹಕಾರಿ ಸಂಘದ ಅಧ್ಯಕ್ಷ ಸುರೇಶ ವಾಲಿಕಾರ, ಪ್ರಾ.ಶಾ.ಶಿ.ಸಂಘದ ಉಪಾಧ್ಯಕ್ಷೆ(ಮಹಿಳಾ) ರೇಣುಕಾ ಬಸಪ್ಪ ಆಲೂರ, ಸಹ ಕಾರ್ಯದರ್ಶಿ(ಮಹಿಳಾ) ಸರಸ್ವತಿ ಬನ್ನೆಟ್ಟಿ, ಕೋಶಾಧ್ಯಕ್ಷ ಆರ್ ಎಸ್ ಹಿಪ್ಪರಗಿ, ಸಹ ಕಾರ್ಯದರ್ಶಿ ಅಲ್ತಾಫ್ ನಗಾರ್ಚಿ, ಸಹ ಕಾರ್ಯದರ್ಶಿ ಎನ್.ಕೆ.ಸಿಪಾಯಿ, ಸಂಘಟನಾ ಕಾರ್ಯದರ್ಶಿ (ಮಹಿಳಾ) ನೀಲಮ್ಮ ಮೈಲೇಶ್ವರ, ಶ್ರೀಶೈಲ ನಾಯ್ಕೋಡಿ, ಶಿಕ್ಷಕ ಆರ್ ಎಲ್ ಕುಲಕರ್ಣಿ ಮತ್ತಿತರರು ಇದ್ದರು.



# ಕಾರುಣ್ಯಾಶ್ರಮದಲ್ಲಿ ಜಿಂದಾಲಿನ ಚಿತ್ರಾಲ್ ಕುಟುಂಬದಿಂದ ಮಹಾಪ್ರಸಾದ ಸೇವೆ

❑ ನೈಜ್ಯ ದೆಸೆ ನ್ಯೂಸ್

ಸಿಂಧನೂರು – ತೋರಣಗಲ್ ಜಿಂದಾಲಿನ ವೈಷ್ಣವಿ ಅರುಣ್ ಕುಮಾರ್ ಚಿತ್ರಾಲ್ ಈ ಆದ-’ರ್ಶ ದಂಪತಿಗಳ ಮಗನಾದ ಹಾರ್ಧಿಕ್ ಅವರ ಜನ್ಮ ಸಾರ್ಥಕ ದಿನ ಹಾಗೂ ದಿ. ಶಿವಗಂಗಮ್ಮ ಕಂಪ್ಲಿ ಇವರುಗಳ 8ನೇ ವರ್ಷದ ಪುಣ್ಯಾರಾಧನ ಕಾರ್ಯಕ್ರಮವನ್ನು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ವಿವಿಧ ಬಗೆಯ ಮಹಾಪ್ರಸಾದ ಸೇವೆ ಹಾಗೂ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಕಾರ್ಯಕ್ರಮಗಳು ನೆರವೇ-ರಿವು. ಈ ಕಾರ್ಯಕ್ರಮದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಮಾತನಾಡಿ ಪ್ರತಿ ವರ್ಷವೂ ಕೂಡ ಜಿಂದಾಲಿನ ಚಿತ್ರಾಲ್ ಕುಟುಂಬ ಹಾಗೂ ಕಂಪ್ಲಿಯ ದಿ.ಶಿವಲಿಂಗಮ್ಮ ಅವರ ಕುಟುಂಬದಿಂದ ಆಶ್ರಮದಲ್ಲಿ ಅನ್ನಸಂತರ್ಪಣೆ ಕಾರ್ಯಕ್ರಮ ನೆರವೇರುತ್ತಿರುವುದು. ಆಶ್ರಯದಾತರುಗಳಿಗೆ ಹಬ್ಬದ ವಾತಾವರಣ ಉಂಟಾಗಿರುತ್ತದೆ. ದಾನಿಗಳು ಕಾರುಣ್ಯಾಶ್ರಮದಲ್ಲಿನ ಅನ್ನ ಸಂತರ್ಪಣೆ ಕಾರ್ಯಕ್ರಮಕ್ಕೆ ಅರ್ಥ ಕಲ್ಪಿಸಿ ಕೊಟ್ಟಿದ್ದಾರೆ. ಇವರುಗಳು ಅನಾಥರ ನೋಂದವರ ಪಾಲಿಗೆ ಮಹಾದಾಸೋಹಿಗಳಾಗಿ ಭಗವಂತನ ಕೃಪೆಗೆ ಪಾತ್ರರಾಗಿದ್ದಾರೆ. ಇಂತಹ ಪುಣ್ಯಾತ್ಮರ ಸಹಾಯ ಸಹಕಾರದಿಂದಾಗಿ ಕಾರುಣ್ಯ ಕುಟುಂಬದ ನಿರ್ವಹಣೆ ಮಾಡುತ್ತಿದ್ದೇವೆ. ಇಂದಿನ ಈ ಕಾರ್ಯಕ್ರಮದಲ್ಲಿ ಆಶ್ರಮದಲ್ಲಿನ ಆಶ್ರಯದಾತರುಗಳು ನಮ್ಮ ಹಾರ್ದಿಕ್ ಚಿತ್ರಾಲ್ ಅವರಿಗೆ ಜನ್ಮದಿನದ ಈ ಸಂದರ್ಭದಲ್ಲಿ ವಿಶೇಷ ಪ್ರಾರ್ಥನೆಯೊಂದಿಗೆ ಹಾರೈಸಿದ್ದಾರೆ. ಮತ್ತು ದಿ.ಶಿವಗಂಗಮ್ಮ ಅವ-ರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿ ಅವರ ಆತ್ಮಕ್ಕೆ ಶಾಂತಿ ಕೋರಿದ್ದಾರೆ. ಇಂತಹ ವಿಶೇಷ ಕಾರ್ಯಕ್ರಮಗಳನ್ನು ದಾನಿಗಳು ಕಾರುಣ್ಯದಂತಹ ಕರುಣೆಯ ಕುಟುಂಬದಲ್ಲಿ ಆಚರಿಸಿ ಅಂಧ,-ಅನಾಥರ ಬಾಳಿಗೆ ಬೆಳಕಾಗಿ ಹಸಿವು ನೀಗಿಸುವ ಅನ್ನದಾತರಾಗಿರಿ ಎನ್ನುವುದು ಸಾರ್ವಜನಿಕರಲ್ಲಿ ವಿಶೇಷ ಕೋರಿಕೆಯಾಗಿದೆ. ಈ ಕುಟುಂಬಗಳಿಗೆ ಭಗವಂತನ ಆಶೀರ್ವಾದ ಸದಾವಕಾಲವಿರಲಿ ಎಂದು ನಾವೆಲ್ಲರೂ ಪ್ರಾರ್ಥಿಸಿ ಕೊಂಡು ಈ ಕುಟುಂಬಗಳಿಗೆ ಹಾರೈಸಿದ್ದೇವೆ ಎಂದು ಭಾವನಾತ್ಮಕವಾಗಿ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಆಶ್ರಮದ ಸಿಬ್ಬಂದಿಗಳಾದ ಸಿದ್ದಯ್ಯ ಸ್ವಾಮಿ. ಮರಿಯಪ್ಪ. ಜ್ಯೋತಿ. ಮಹಾಂತೇಶ ದೋಟಿಹಾಳ. ಬಸವ ಸ್ವಾಮಿ ಆಶ್ರಯದಾತರುಗಳು ಉಪಸ್ಥಿತರಿದ್ದರು.




# ಸರ್ವಜ್ಞ ವಿದ್ಯಾಪೀಠದಲ್ಲಿ ಉಪನ್ಯಾಸ ಕಾರ್ಯಕ್ರಮ

❑ ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಪಟ್ಟಣದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಸರ್ವಜ್ಞ ವಿದ್ಯಾಪೀಠ ಕನ್ನಡ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಶನಿವಾರದಂದು ಶಾಲಾ ವಿದ್ಯಾರ್ಥಿನಿಯರಿಗಾಗಿ, ಕರ್ನಾಟಕ ರಾಜ್ಯ ಪ್ರಸೂತಿ ಹಾಗೂ ಸ್ತ್ರೀರೋಗ ಸಂಘ ಇವರ ಸಂಯುಕ್ತ ಆಶ್ರಯದಲ್ಲಿ ಸ್ತ್ರೀ ರೋಗಕ್ಕೆ ಸಂಬಂಧಿಸಿದ, ಅವರ ಸಮಸ್ಯೆಯಾದ ಮಾಸಿಕ ಋತುಚಕ್ರ ಕುರಿತು ಹಾಗೂ ಮಕ್ಕಳ ಆಹಾರ ಪದ್ಧತಿ ಮತ್ತು ವಿದ್ಯಾರ್ಥಿನಿಯರಿಗೆ ಸಂಬಂಧಿಸಿದ ವಿಷಯಗಳ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಸ್ಥಳೀಯ ಅನುಭವಿ ವೈದ್ಯೆಯರಾದ ಡಾ.ಗಂಗಾಂಬಿಕಾ ಪಾಟೀಲ ಮತ್ತು ಡಾ. ವಿಜಯಲಕ್ಷ್ಮಿ ಹಜೇರಿ ಹಾಗೂ ಡಾ.ಮಧುಬಾಲಾ ಸಿಂಘಾಲ ಅವರು ಆರೋಗ್ಯಯುತ ಜೀವನ ಶೈಲಿ ಮತ್ತು ಬೊಜ್ಜು ತಡೆಗಟ್ಟುವ ವಿಧಾನಗಳ ಕುರಿತು ಉಪನ್ಯಾಸವನ್ನು ನೀಡಿದರು. ಕಾರ್ಯಕ್ರಮದಲ್ಲಿ ಡಾ.ಸರೋಜಾ ವಿಜಯಕುಮಾರ ಕಾರ್ಚಿ, ಡಾ.ಪ್ರಿಯಾ ಆನಂದ ಭಟ್, ಸರ್ವಜ್ಞ ವಿದ್ಯಾಪೀಠದ ಸಂಸ್ಥಾಪಕ ಅಧ್ಯಕ್ಷರಾದ ಸಿದ್ದನಗೌಡ ಬ.ಮಂಗಳೂರ, ಮುಖ್ಯ ಗುರುಗಳಾದ ಸಂತೋಷ ಪವಾರ, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಕುಮಾರಿ ಸ್ವಪ್ನ ದೇಸಾಯಿ ಮತ್ತು ಸ್ವರ್ಣ ಕುಲಕರ್ಣಿ ಪ್ರಾಥ-’ನೆ ಗೀತೆಯನ್ನು ಹಾಡಿದರು. ಶಿಕ್ಷಕ ರಾಜು ಜವಳಗೇರಿ ಕಾರ್ಯಕ್ರಮವನ್ನು ನಿರೂಪಿಸಿದರು.



# ದೇವದುರ್ಗ ಜೆಡಿಎಸ್ ಪರಿಶಿಷ್ಟ ಜಾತಿ(ಎಸ್.ಸಿ) ಮೋರ್ಚಾ ತಾಲ್ಲೂಕು ಅಧ್ಯಕ್ಷರಾಗಿ ಹುಸೇನಪ್ಪ ಗುತ್ತೇದಾರ ನೇಮಕ

❑ ನೈಜ್ಯ ದೆಸೆ ನ್ಯೂಸ್

ದೇವದುರ್ಗ, ಆ.22: ಜಾತ್ಯತೀತ ಜನತಾದಳ (ಜೆಡಿಎಸ್) ದೇವದುರ್ಗ ತಾಲ್ಲೂಕು ಪರಿಶಿಷ್ಟ ಜಾತಿ (ಎಸ್‌ಸಿ) ಮೋರ್ಚಾ ಘಟಕದ ನೂತನ ಅಧ್ಯಕ್ಷರಾಗಿ ಜಾಲಹಳ್ಳಿಯ ಹುಸೇನಪ್ಪ ಗುತ್ತೇದಾರ ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ನೇಮಕ ಮಾಡಲಾಗಿದೆ.ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹಾಗೂ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರ ತತ್ವ ಸಿದ್ಧಾಂತಗಳಿಗೆ ಬದ್ಧರಾಗಿ ಪಕ್ಷದಲ್ಲಿ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ಹುಸೇನಪ್ಪ ಗುತ್ತೇದಾರ ಅವರನ್ನು, ದೇವದುರ್ಗ ಕ್ಷೇತ್ರದ ಶಾಸಕಿ ಹಾಗೂ ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯೆ ಕರೆಮ್ಮ ಜಿ. ನಾಯಕ ಅವರ ಶಿಫಾರಸಿನ ಮೇರೆಗೆ ತಾಲ್ಲೂಕು ಅಧ್ಯಕ್ಷ ಬಸನಗೌಡ ದೇಸಾಯಿ ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ತಾಲ್ಲೂಕಿನಲ್ಲಿ ಹಿರಿಯರ ಮಾರ್ಗದರ್ಶನದಲ್ಲಿ ಪಕ್ಷ ಸಂಘಟನೆ, ಪಕ್ಷದ ಬಲವರ್ಧನೆ ಹಾಗೂ ಪರಿಶಿಷ್ಟ ಜಾತಿ ಸಮುದಾಯದ ಏಳಿಗೆಗಾಗಿ ನಿಷ್ಠೆಯಿಂದ ಶ್ರಮಿಸುವಂತೆ ಶಾಸಕಿ ಕರೆಮ್ಮ ಜಿ. ನಾಯಕ ಅವರು ನೂತನ ಅಧ್ಯಕ್ಷರಿಗೆ ಶುಭ ಹಾರೈಸಿ, ಅಧಿಕೃತ ನೇಮಕಾತಿ ಪತ್ರವನ್ನು ವಿತ-ರಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ನೂತನ ಅಧ್ಯಕ್ಷ ಹುಸೇನಪ್ಪ ಗುತ್ತೇದಾರ, “ಪಕ್ಷದ ರಾಜ್ಯ ನಾಯಕರು ಹಾಗೂ ಜನಪ್ರಿಯ ಶಾಸಕಿ ಕರೆಮ್ಮ ಜಿ. ನಾಯಕ ಅವರು ನನ್ನ ಮೇಲೆ ವಿಶ್ವಾಸವಿಟ್ಟು ತಾಲ್ಲೂಕು ಎಸ್‌ಸಿ ಮೋರ್ಚಾ ಅಧ್ಯಕ್ಷ ಸ್ಥಾನ ನೀಡಿರುವುದಕ್ಕೆ ಧನ್ಯವಾದಗಳು. ಶಾಸಕರ ಜನಪರ ಅಭಿವೃದ್ಧಿ ಕಾರ್ಯಗಳೇ ನನಗೆ ಪಕ್ಷ ಸಂಘಟನೆಗೆ ಮುಖ್ಯ ಆಧಾರವಾಗಿದ್ದು, ಹಿರಿಯರ ಮಾರ್ಗದರ್ಶನದಲ್ಲಿ ಪಕ್ಷವನ್ನು ಬಲಪಡಿಸಲು ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ” ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಶಾಸಕಿ ಕರೆಮ್ಮ ಜಿ. ನಾಯಕ, ತಾಲ್ಲೂಕು ಜೆಡಿ-ಎಸ್ ಅಧ್ಯಕ್ಷ ಬಸನಗೌಡ ದೇಸಾಯಿ, ಪ್ರಧಾನ ಕಾರ್ಯದರ್ಶಿ ಗೋವಿಂದರಾಜ ನಾಯಕ್ ತಿಂಥಣಿ, ಎಸ್‌ಟಿ ಘಟಕದ ಕಾರ್ಯಾಧ್ಯಕ್ಷ ಶಿವನಗೌಡ ಜಾಲಹಳ್ಳಿ, ಪಕ್ಷದ ಮುಖಂಡರಾದ ನಾರಾಯಣ ಯರಗುಡ್ಡ, ತಿಮ್ಮಣ್ಣ ಗ್ಯಾರೇಜ್, ದೇವಪ್ಪ ನಿವೃತ್ತ ಪೊಲೀಸ್, ರುದ್ರಗೌಡ ಪಡಶೆಟ್ಟಿ,ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ






## ಎಸ್‌ಡಿಎಂಸಿ ಅಧ್ಯಕ್ಷರಾಗಿ ಬಸಯ್ಯ ಹಿರೇಮಠ

❑ ನೈಜ್ಯ ದೆಸೆ ನ್ಯೂಸ್




ಕುಷ್ಟಗಿ: ಪಟ್ಟಣದ ಕೃಷ್ಣಗಿರಿ ಕಾಲೋನಿಯ ಪಿಎಂ ಶ್ರೀ ಕರ್ನಾಟಕ ಪಬ್ಲಿಕ್ ಸ್ಕೂಲ್‌ಗೆ ನೂತನ ಎಸ್‌ಡಿಎಂಸಿ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಬಸಯ್ಯ ಎಸ್. ಹಿರೇಮಠ ಹಾಗೂ ಉಪಾಧ್ಯಕ್ಷರಾಗಿ ದೇವಮ್ಮ ಶ್ರೀಶೈಲ ಕಾಶಿಂ ಆಯ್ಕೆಯಾದರು.ಸದಸ್ಯರಾಗಿ ದಶರಥ ಸೂರ್ವೆ, ಶಂಭುಲಿಂಗಪ್ಪ, ಹುಲ್ಲೇಶ, ಟಿ. ಸುಂಕಯ್ಯ, ಸವಿತಾ, ರೇಣುಕಾ, ಸಂಗೀತಾ, ರಿಯಾನ್ ಬೇಗಂ, ನಾಗರಾಜ ಇಂಡಿ, ಲಕ್ಷ್ಮವ್ವ ಭರಮಪ್ಪ, ಹುಸೇನಪಾಷ, ಮೌಲಾಸಾಬ, ಯಮನೂರಪ್ಪ ಕೆ., ನಿರ್ಮಲ ತರಲಕಟ್ಟಿ, ಶಿವಗಂಗಾ ಹವಾಲ್ದಾರ ಹಾಗೂ ವಿಶಾಲಾಕ್ಷಿ ಪಾಟೀಲ್ ಆಯ್ಕೆಯಾಗಿದ್ದಾರೆ.ನೂತನ ಪದಾಧಿಕಾ-ರಿಗಳು ಶಾಲೆಯ ಶೈಕ್ಷಣಿಕ ಗುಣಮಟ್ಟ ಸುಧಾರಣೆ, ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿ ಹಾಗೂ ಶಾಲೆಯ ಮೂಲಸೌಕರ್ಯಗಳ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಮುಖ್ಯ ಶಿಕ್ಷಕ ಸುಭಾನಿ ನದಾಫ್ ಹೇಳಿದರು.ಆಯ್ಕೆ ಪ್ರಕ್ರಿಯೆಯಲ್ಲಿ ಸಿಆರ್‌ಪಿ ದುಂಡಪ್ಪ ಹೊಸಮನಿ, ಉಮೇಶ ಮೆಲಸಕ್ರಿ ಸೇ-ರಿದಂತೆ ಶಾಲಾ ಸಿಬ್ಬಂದಿ ಹಾಗೂ ಕೃಷ್ಣಗಿರಿ ಕಾಲೋನಿಯ ಗುರು-ಹಿರಿಯರು ಮತ್ತು ಯುವಕರು ಉಪಸ್ಥಿತರಿದ್ದರು.

## ಸಾಹಿತ್ಯ ಸಿಂಚನ

### *ಕಾಗೆ ಪಾಡು*

ತುತ್ತು ಅರಸಿ ಹೊರಟ ಜೋಡಿ
ಕಾಗೆಗಳು ಕಾಯುತ್ತಾ ಕಾತರದಿ,
ಮಳೆಯ ಸಿಂಚನಕೆ ಮೈ ಮುದುಡಿ
ಕುಳಿತಿವೆ ಮೌನ ತಾಳಿ!

ಕೂಗಿ ಕರೆದರೂ ಕೇಳುವವರಿಲ್ಲ,
ತುತ್ತು ನೀಡಲು ಯಾರೂ ಬರುವುದಿಲ್ಲ!
'ಕಾ.. ಕಾ..' ಧ್ವನಿ ಕೇಳಿದರೆ ಸಾಕು
ಅಪಶಕುನದ ಪಟ್ಟ ಕಟ್ಟುವರಲ್ಲ.

ದೇಹದ ಕಪ್ಪು ಪ್ರಕೃತಿಯ ಕೊಡುಗೆ
ಅದರೊಳು ಇದೆಯೇ ಇವುಗಳ ತಪ್ಪು?
ಇರುವುದನ್ನೇ ಶ್ರೇಷ್ಠವೆಂದೊಪ್ಪಿದರೆ
ಆಗುವುದು ತಾನೇ ಮನದಲಿ ತಂಪು.

ಶಕುನ-ಅಪಶಕುನ ಎನ್ನುವುದಿಲ್ಲ,
ನಮ್ಮಂತೆಯೇ ಸಹಜ ಜೀವ ಇವುಗಳೆಲ್ಲ;
ಬಣ್ಣವ ನೋಡಿ ಮಣೆ ಹಾಕಬೇಡಣ್ಣ,
ಗುಣಕ್ಕೆ ಸ್ನೇಹ ಮಾಡ ಬೇಕಣ್ಣ!

ಅಗುಳ ಕಂಡರೆ, ಹಾರಿ ಬಳಗವ,
ಕೂಗಿ ಕರೆಯುವ ಒಲವಿನ ಮೋಡಿ!
ಹಂಚಿ ತಿನ್ನುವ ಕಾಗೆಯ ಗುಣವ,
ಕಲಿಯಬೇಕಿದೆ ನಾವು ನೋಡಿ!

– ಡಾ ಮಹೇಂದ್ರ ಕುರ್ಡಿ

# ಶ್ರಾವಣದಲ್ಲಿ ದಕ್ಷಿಣ ಕಾಶಿ ಕಾಲಕಾಲೇಶ್ವರ ಕ್ಷೇತ್ರಕ್ಕೆ ಭಕ್ತಸಾಗರ

ನೈಜ್ಯ ದೆಸೆ ನ್ಯೂಸ್



ಗಜೇಂದ್ರಗಡ: ಶ್ರಾವಣ ಮಾಸದ ನಿಮಿತ್ತ ಗಜೇಂದ್ರಗಡ ತಾಲೂಕಿನ ಸುಪ್ರಸಿದ್ಧ ದಕ್ಷಿಣ ಕಾಶಿ ಶ್ರೀ ಕಾಲಕಾಲೇಶ್ವರ ಪುಣ್ಯಕ್ಷೇತ್ರದಲ್ಲಿ ವಿಶೇಷ ಪೂಜೆ, ಅಭಿಷೇಕ, ದೀರ್ಘದಂಡ ನಮಸ್ಕಾರ ಹಾಗೂ ಜವಳ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಿತ್ಯವೂ ನಡೆಯುತ್ತಿವೆ. ಸಾವಿರಾರು ಭಕ್ತರು ದೇವಸ್ಥಾನಕ್ಕೆ ಆಗಮಿಸಿ ಶಿವನ ದರ್ಶನ ಪಡೆದು ಪುನೀತರಾಗುತ್ತಿದ್ದಾರೆ.ಶ್ರಾವಣ ಮಾಸದ ಅಂಗವಾಗಿ ತಾಲೂಕಿನ ವಿವಿಧ ಗ್ರಾಮಗಳಲ್ಲದೆ ರಾಜ್ಯದ ವಿವಿಧ ಭಾಗಗಳಿಂದಲೂ ಭಕ್ತರು ಪಾದಯಾತ್ರೆಯ ಮೂಲಕ ಭಜನೆ ಮಾಡುತ್ತಾ ಕಾಲಕಾಲೇಶ್ವರ ಕ್ಷೇತ್ರಕ್ಕೆ ಆಗಮಿಸುತ್ತಿದ್ದಾರೆ. ಹೊರ ರಾಜ್ಯಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುತ್ತಿದ್ದು, ಕ್ಷೇತ್ರದಲ್ಲಿ ಭಕ್ತಿಸ್ಫೂರ್ತಿಯ ವಾತಾವರಣ ನಿರ್ಮಾಣವಾಗಿದೆ.ಸುಮಾರು 300 ಅಡಿ ಎತ್ತರದ ಬೆಟ್ಟದ ಮೇಲಿರುವ ಪುರಾತನ ಶ್ರೀ ಕಾಲಕಾಲೇಶ್ವರ ದೇವಾಲಯವು ಗುಹಾಂತರ ಶೈಲಿಯಲ್ಲಿದ್ದು, ಇಲ್ಲಿನ ಶಿವಲಿಂಗವು ಸ್ವಯಂಭೂ ಮೂರ್ತಿಯಾಗಿದೆ. ದೇವಾಲಯಕ್ಕೆ ತಲುಪಲು ಸುಂದರವಾದ ಕಲ್ಲಿನ ಮೆಟ್ಟಿಲುಗಳ ಹಾದಿಯಿದ್ದು, ದೇವಸ್ಥಾನದ ಆವರಣದಲ್ಲಿ ಸದಾಶಿವನ ಸನ್ನಿಧಿಯಲ್ಲಿ ನೀರಿನ ಒರತೆ (ಅಂತರಗಂಗೆ) ವಿಶೇಷ ಆಕರ್ಷಣೆಯಾಗಿದೆ. ಈ ಕಾರಣದಿಂದಲೇ ಭಕ್ತರು ಕ್ಷೇತ್ರವನ್ನು ಪ್ರೀತಿಯಿಂದ 'ದಕ್ಷಿಣ ಕಾಶಿ' ಎಂದು ಕರೆಯುತ್ತಾರೆ.ಶ್ರಾವಣದ ಅಂಗವಾಗಿ ಕ್ಷೇತ್ರಕ್ಕೆ ಆಗಮಿಸುವ ಭಕ್ತರಿಗೆ ದಾಸೋಹದ ವ್ಯವಸ್ಥೆ ಮಾಡಲಾಗಿದ್ದು, ದೇವರ ದರ್ಶನಕ್ಕೆ ಬರುವ ಭಕ್ತರಿಗೆ ಅನ್ನಪ್ರಸಾದವನ್ನು ನೀಡಲಾಗುತ್ತಿದೆ.ಈ ಕುರಿತು ಮಠದ ಅರ್ಚಕರಾದ ವೇದಮೂರ್ತಿ ಶಿವಕುಮಾರ ಗುರುಸ್ಥಳಮಠ ಮಾತನಾಡಿ, ಶ್ರಾವಣ ಮಾಸದಲ್ಲಿ ಪ್ರತಿದಿನವೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಕ್ಷೇತ್ರಕ್ಕೆ ಆಗಮಿಸಿ ಕಾಲಕಾಲೇಶ್ವರನ ದರ್ಶನ ಪಡೆದು ಪುನೀತರಾಗುತ್ತಿದ್ದಾರೆ. ವಿವಿಧ ಗ್ರಾಮಗಳಿಂದ ಪಾದಯಾತ್ರೆ ಹಾಗೂ ಭಜನೆಯೊಂದಿಗೆ ಭಕ್ತರು ಆಗಮಿಸುತ್ತಿದ್ದು, ಭಕ್ತರಿಗೆ ದಾಸೋಹ ಪ್ರಸಾದದ ವ್ಯವಸ್ಥೆಯನ್ನೂ ಮಾಡಲಾಗಿದೆ ಎಂದು ತಿಳಿಸಿದರು.

# ಜಾಲಹಳ್ಳಿ ಪೊಲೀಸ್ ಠಾಣೆಯಲ್ಲಿ ಈದ್ ಮಿಲಾದ್ ಹಬ್ಬದ ಶಾಂತಿ ಸಭೆ

ನೈಜ್ಯ ದೆಸೆ ನ್ಯೂಸ್



ಜಾಲಹಳ್ಳಿ/ದೇವದುರ್ಗ, ಆ.24: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಈದ್ ಮಿಲಾದ್ ಹಬ್ಬದ ಅಂಗವಾಗಿ ಶನಿವಾರ ಶಾಂತಿ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ವೈಶಾಲಿ ಜಳಕಿ ವಹಿಸಿದ್ದರು.ಯುವಕರು ಸಾಮಾಜಿಕ ಜಾಲತಾಣ ಬಳಕೆಯಲ್ಲಿ ಎಚ್ಚರ ವಹಿಸಬೇಕು: ಪಿಎಸ್ಐ ವೈಶಾಲಿ ಜಳಕಿಶಾಂತಿ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪಿಎಸ್ಐ ವೈಶಾಲಿ ಜಳಕಿ, ಈದ್ ಮಿಲಾದ್ ಸೇರಿದಂತೆ ಎಲ್ಲ ಹಬ್ಬಗಳನ್ನು ಶಾಂತಿ, ಸೌಹಾರ್ದತೆ ಹಾಗೂ ಸಹೋದರತ್ವದಿಂದ ಆಚರಿಸಬೇಕು ಎಂದು ಕರೆ ನೀಡಿದರು. ಯುವಕರು ಸಾಮಾಜಿಕ ಜಾಲತಾಣಗಳನ್ನು ಬಳಸುವಾಗ ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಯಾವುದೇ ರೀತಿಯ ಪ್ರಚೋದನಕಾರಿ ಅಥವಾ ಸಮಾಜದಲ್ಲಿ ಅಶಾಂತಿ ಉಂಟುಮಾಡುವಂತಹ ವಿಷಯಗಳನ್ನು ಹಂಚಿಕೊಳ್ಳಬಾರದು ಎಂದು ಸಲಹೆ ನೀಡಿದರು.ಪೊಲೀಸ್ ಇಲಾಖೆ ಸಾಮಾಜಿಕ ಜಾಲತಾಣಗಳ ಚಟುವಟಿಕೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುತ್ತದೆ. ಯಾವುದೇ ಸಮಸ್ಯೆ ಎದುರಾದರೂ ಸಾರ್ವಜನಿಕರು ತಕ್ಷಣ ಪೊಲೀಸ್ ಇಲಾಖೆಯ ಗಮನಕ್ಕೆ ತರಬೇಕು. ಎಲ್ಲರೂ ಪರಸ್ಪರ ಸಹಕಾರದೊಂದಿಗೆ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಿಕೊಂಡು ಹಬ್ಬ ಆಚ-ರಿಸಬೇಕು ಎಂದು ತಿಳಿಸಿದರು.ಸೆ. 26ರಂದು ಈದ್ ಮಿಲಾದ್ ಮೆರವಣಿಗೆಜಾಮಿಯಾ ಮಸೀದಿ ಅಧ್ಯಕ್ಷ ಬಾಬಾ ಮೆಡಿಕಲ್ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಪ್ರವಾದಿ ಹಜರತ್ ಮುಹಮ್ಮದ್ ಮುಸ್ತಫಾ (ಸ.ಅ.ವ.) ಅವರ ಜನ್ಮದಿನದ ಅಂಗವಾಗಿ ಈದ್ ಮಿಲಾದ್ ಹಬ್ಬವನ್ನು ಆಚರಿಸಲಾಗುವುದು ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಬೆಳಿಗ್ಗೆ 9.30ಕ್ಕೆ ಜಾಮಿಯಾ ಮಸೀದಿಯಿಂದ ಮೆರವಣಿಗೆ ಆರಂಭವಾಗಲಿದ್ದು, ಭಗೀರಥ ವೃತ್ತ, ಅಂಬೇಡ್ಕರ್ ವೃತ್ತ, ಟಿಪ್ಪು ಸುಲ್ತಾನ್ ವೃತ್ತ, ವಾಲ್ಮೀಕಿ ವೃತ್ತದ ಮೂಲಕ ರಂಗನಾಥ ದೇವಸ್ಥಾನದ ರಸ್ತೆಯಾಗಿ ಸಂಚರಿಸಿ ಮತ್ತೆ ಜಾಮಿಯಾ ಮಸೀದಿಗೆ ತಲುಪಲಿದೆ. ಮೆರವಣಿಗೆಯಲ್ಲಿ ಸ್ತಬ್ಧಚಿತ್ರಗಳು ಹಾಗೂ ಭಕ್ತಿ ಗೀತೆಗಳು ಇರಲಿವೆ ಎಂದು ಹೇಳಿದರು.ಜಾಲಹಳ್ಳಿಯ ಸಮಸ್ತ ನಾಗರಿಕರು ಈದ್ ಮಿಲಾದ್ ಹಬ್ಬದ ಮೆರವಣಿಗೆಯಲ್ಲಿ ಭಾಗವಹಿಸಿ ಶಾಂತಿ ಮತ್ತು ಸೌಹಾರ್ದತೆಯ ಸಂದೇಶ ಸಾರಬೇಕು ಎಂದು ಮನವಿ ಮಾಡಿದರು.ಶಾಂತಿ□ಸೌಹಾರ್ದತೆಯ ಸಂದೇಶ ಪಾಲಿಸಬೇಕುಹಿರಿಯರಾದ ಸಾಬಣ್ಣ ಕಮಲದಿನ್ನಿ ಮಾತನಾಡಿ, ಪ್ರವಾದಿ ಹಜರತ್ ಮುಹಮ್ಮದ್ (ಸ.ಅ.ವ.) ಅವರು ಸಾರಿದ ಶಾಂತಿ, ಸೌಹಾರ್ದತೆ ಮತ್ತು ಭಾತೃತ್ವದ ಸಂದೇಶವನ್ನು ಎಲ್ಲರೂ ಪಾಲಿಸಬೇಕು ಎಂದು ಹೇಳಿದರು.ಜಾಲಹಳ್ಳಿಯಲ್ಲಿ ಎಲ್ಲಾ ಸಮಾಜದವರು ಒಂದಾಗಿ ಪರಸ್ಪರ ಗೌರವದಿಂದ ಎಲ್ಲ ಸಮಾಜಗಳ ಹಬ್ಬಗಳನ್ನು ಶಾಂತಿ ಮತ್ತು ಸೌಹಾರ್ದತೆಯಿಂದ ಆಚರಿಸುವ ಪರಂಪರೆ ಹಿಂದಿನಿಂದಲೂ ಇದೆ. ಅದನ್ನು ಮುಂದುವರಿಸಿಕೊಂಡು ಹೋಗಬೇಕು ಎಂದು ತಿಳಿಸಿದರು.ಮುಖಂಡರಾದ ಬಾಳಪ್ಪ ಬಾವಿಮನಿ ಹಾಗೂ ಮೌನೇಶ್ ಗಾಣದಾಳ ಮಾತನಾಡಿ, ಈದ್ ಮಿಲಾದ್ ಹಬ್ಬವು ಶಾಂತಿ, ಸೌಹಾರ್ದತೆ ಮತ್ತು ಸಹೋದರತ್ವದ ಪ್ರತೀಕವಾಗಿದೆ ಎಂದು ಹೇಳಿದರು.ಗಣ್ಯರು, ಮುಖಂಡರು, ಪೊಲೀಸ್ ಸಿಬ್ಬಂದಿ ಭಾಗಿಸಭೆಯಲ್ಲಿ ಶ್ರೀಧರ್ ದೇಸಾಯಿ, ಶಂಕರಗೌಡ ಮಾಲಿಪಾಟೀಲ್ ಹೊರಟ್ಟಿ, ಪ್ರಾಥ-ಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಗೋವಿಂದಪ್ಪ ಹಲಗೇರಿ, ತಿಮ್ಮಣ್ಣ ನಾಯಕ್ ದಿವಾನ್, ಗ್ರಾಮ ಪಂಚಾಯಿತಿ ಸದಸ್ಯ ದುರ್ಗಪ್ಪ ರಾಮ್ ಪಾಳಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಜಾಲಹಳ್ಳಿಯ ಉಪಾಧ್ಯಕ್ಷ ಖುರ್ಷಿದ್ ಪಟೇಲ್, ಪತ್ರಕರ್ತರಾದ ಗಿರಿಯಪ್ಪ ಪೂಜಾರಿ, ಮೌನೇಶ್ ಜಾಲಹಳ್ಳಿ, ರಾಜು ನಾಯಕ್, ರಾಜ್ ಮಹಮ್ಮದ್ ಸಾಬ್ ಸರ್ನೌಬತ್, ಜಾಮಿಯಾ ಮಸೀದಿ ಕಾರ್ಯದರ್ಶಿಗಳಾದ ಹೈದರ್ ಸಾಬ್ ಮುಲ್ಲಾ ಹಾಗೂ ಹುಸೇನ್ ನಾಸಿ, ಚನ್ನಬಸವ ಮ್ಯಾಕಲದೊಡ್ಡಿ, ರಮೇಶ್ ಬಾವಿಮನಿ, ಫಯಾಜ್ ಅಹ್ಮದ್ ಬಳಿಗರ್, ಜಹೀರ್, ನಬಿ ದಾದೆಬಾಯಿ ಸೇರಿದಂತೆ ಊರಿನ ಸಾರ್ವಜನಿಕರು ಹಾಗೂ ಪೊಲೀಸ್ ಠಾಣೆಯ ಸಿಬ್ಬಂದಿ ಹಾಜರಿದ್ದರು. ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

# ಸಂಗೀತಕ್ಕಿದೆ ಮನಸ್ಸು ಹಗುರಗೊಳಿಸುವ ಶಕ್ತಿ ಸಾಂಸ್ಕೃತಿಕ ಕಾರ್ಯಕ್ರಮಗಳಿಂದ ಉತ್ತಮ ಸಂಸ್ಕಾರ ಬೆಳೆಸಲು ಸಾಧ್ಯ ಕರಿಬಸವ ಶಿವಾಚಾರ್ಯರು

ನೈಜ್ಯ ದೆಸೆ ನ್ಯೂಸ್



ಕುಷ್ಟಗಿ: ಪ್ರತಿಯೊಬ್ಬರ ಮನಸ್ಸನ್ನು ಹಗುರಗೊಳಿಸುವ ಶಕ್ತಿ ಸಂಗೀತಕ್ಕಿದೆ. ಸಂಗೀತದ ಕಲೆಗೆ ತಲೆದೂಗದವರಿಲ್ಲ ಎಂದು ಮದ್ದಾನೇಶ್ವರ ಮಠದ ಕರಿಬಸವ ಶಿವಾಚಾರ್ಯರು ಹೇಳಿದರು.ಪಟ್ಟಣದ ಮಲ್ಲಿಕಾರ್ಜುನ ಭವನದಲ್ಲಿ ಹಿರೇಮನ್ನಾಪುರದ ಸೌರಭ ಸಾಂಸ್ಕೃತಿಕ ಕಲಾ ಬಳಗದ ಸಹಯೋಗದಲ್ಲಿ ಆಯೋಜಿಸಿದ್ದ ಗಾಯನ, ನೃತ್ಯ, ಸುಗಮ ಸಂಗೀತ, ಜಾನಪದ ಹಾಗೂ ಕರೋಕೆ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.ಭಾರತೀಯ ಸಂಸ್ಕೃತಿಯನ್ನು ಉಳಿಸಿ-ಬೆಳೆಸುವಲ್ಲಿ ಸಾಂಸ್ಕೃತಿಕ ಸಂಸ್ಥೆಗಳ ಪಾತ್ರ ಮಹತ್ವದ್ದಾಗಿದೆ. ಇಂತಹ ಸಂಸ್ಥೆಗಳ ಶ್ರಮದಿಂದ ಸಮಾಜದಲ್ಲಿ ಉತ್ತಮ ಸಂಸ್ಕಾರ ಬೆಳೆಸಲು ಸಾಧ್ಯ ಎಂದರು.ಶಂಕರಲಿಂಗ ಮಠದ ಬಾಲಚಂದ್ರಪ್ಪಜ್ಜ ಮಾತನಾಡಿ, ಧರ್ಮ ರಕ್ಷಣೆ ಕೇವಲ ಮಠಗಳಿಂದ ಮಾತ್ರ ಸಾಧ್ಯವಿಲ್ಲ. ಹಸಿವು ಮತ್ತು ಬಡತನದಲ್ಲಿರುವವರ ರಕ್ಷಣೆಗೆ ಪ್ರತಿಯೊಬ್ಬರೂ ಕೈಜೋಡಿಸಿದಾಗ ಧರ್ಮ ರಕ್ಷಣೆ ಸಾಧ್ಯ. ಮಠಗಳು ಜಾತ್ಯತೀತ ಮನೋಭಾವದಿಂದ ಕಾರ್ಯನಿರ್ವಹಿಸಬೇಕು. ಯುವಜನತೆ ದಾರಿ ತಪ್ಪುತ್ತಿರುವ ಇಂದಿನ ದಿನಗಳಲ್ಲಿ ಸಂಗೀತ ಕಾರ್ಯಕ್ರಮಗಳು ಶ್ಲಾಘನೀಯ ಎಂದರು. ಕಿರುತೆರೆ ನಟ ಶಶಿಧರ್ ಕೋಟೆ ಮಾತನಾಡಿದರು. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳು ಮತ್ತು ವಿವಿಧ ಕ್ಷೇತ್ರಗಳ ಸಾಧಕರಿಗೆ ವೇದಮೂರ್ತಿ ಡಾ. ಕಾಡಯ್ಯ ಶಿವಮೂರ್ತಿ ಸ್ವಾಮಿಗಳು 'ಕರ್ನಾಟಕ ರತ್ನ ಪ್ರಶಸ್ತಿ' ನೀಡಿ ಗೌರವಿಸಿದರು.ಸಾಹಿತಿ ಆರ್.ಕೆ. ಸುಬೇದಾರ್, ಶಿವಾನಂದ ಹಿರೇಮಠ, ಫಕೀರಪ್ಪ ಹೊಸಕಲ್, ರೆಹಮಾನ್ ಸಾಬ್ ಕೋಳೂರು, ಕೆ. ಹುಸೇನ್ ಸಾಬ್, ಬಷೀರ್ ಅಹಮ್ಮದ್, ಇಮಾಮ್ ಸಾಬ್, ರಾಜಮಹಮ್ಮದ್ ಡಾಲಾಯತ್, ಭೀಮಸೇನ ಕುಲಕರ್ಣಿ, ಸುನಿಲ್ ಕುಮಾರ್, ಮಧುರಕರ ಶರಣಯ್ಯ, ಮಹೇಶ ಹಡಪದ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಈದ್ ಮಿಲಾದ್ ಹಾಗೂ ಗಣೇಶ ಹಬ್ಬದ ಹಿನ್ನೆಲೆಯಲ್ಲಿ ಶಾಂತಿ ಸಭೆ

ನೈಜ್ಯ ದೆಸೆ ನ್ಯೂಸ್



ಜಾಲಹಳ್ಳಿ: ಜಾಲಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಮದರಕಲ್ ಗ್ರಾಮದಲ್ಲಿ ಮುಂಬರುವ ಈದ್ ಮಿಲಾದ್ ಹಾಗೂ ಗಣೇಶ ಹಬ್ಬಗಳ ಹಿನ್ನೆಲೆಯಲ್ಲಿ ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್ಐ ಅವರ ನೇತೃತ್ವದಲ್ಲಿ ಶಾಂತಿ ಸಭೆ ನಡೆಸಲಾಯಿತು.ಸಭೆಯಲ್ಲಿ ಗ್ರಾಮದ ವಿವಿಧ ಸಮುದಾಯಗಳ ಮುಖಂಡರು, ಸಾರ್ವಜನಿಕರು ಹಾಗೂ ಯುವಕರು ಭಾಗವಹಿಸಿದ್ದರು. ಹಬ್ಬಗಳನ್ನು ಶಾಂತಿ, ಸೌಹಾರ್ದತೆ ಮತ್ತು ಪರಸ್ಪರ ಸಹಕಾರದೊಂದಿಗೆ ಆಚರಿಸುವಂತೆ ಪಿಎಸ್ಐ ಅವರು ಮನವಿ ಮಾಡಿದರು.ಹಬ್ಬಗಳ ಸಂದರ್ಭದಲ್ಲಿ ಯಾವುದೇ ರೀತಿಯ ಗಲಾಟೆ, ಅಹಿತಕರ ಘಟನೆ, ವದಂತಿ ಅಥವಾ ಪ್ರಚೋದನಕಾರಿ ಚಟುವಟಿಕೆಗಳಿಗೆ ಅವಕಾಶ ನೀಡಬಾರದು. ಸಾಮಾಜಿಕ ಜಾಲತಾಣಗಳಲ್ಲಿ ಹರಡುವ ಯಾವುದೇ ಮಾಹಿತಿಯನ್ನು ಪರಿಶೀಲಿಸದೆ ನಂಬಬಾರದು ಹಾಗೂ ಪ್ರಚೋದನಕಾರಿ ಸಂದೇಶಗಳನ್ನು ಹಂಚಿಕೊಳ್ಳಬಾರದು ಎಂದು ಸಾರ್ವಜನಿಕರಿಗೆ ತಿಳಿಸಲಾಯಿತು.ಈದ್ ಮಿಲಾದ್ ಹಾಗೂ ಗಣೇಶ ಹಬ್ಬಗಳು ಎರಡೂ ಸಮುದಾಯಗಳ ಧಾರ್ಮಿಕ ಭಾವನೆಗಳಿಗೆ ಸಂಬಂಧಿಸಿದ ಪ್ರಮುಖ ಹಬ್ಬಗಳಾಗಿರುವುದ-ರಿಂದ, ಪರಸ್ಪರರ ಧಾರ್ಮಿಕ ಆಚರಣೆಗಳಿಗೆ ಗೌರವ ನೀಡಬೇಕು. ಹಬ್ಬಗಳ ಸಂದರ್ಭದಲ್ಲಿ ಶಾಂತಿ, ಸೌಹಾರ್ದತೆ ಮತ್ತು ಸಹಬಾಳ್ವೆಗೆ ಆದ್ಯತೆ ನೀಡಿ, ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆಯೊಂದಿಗೆ ಸಂಪೂರ್ಣ ಸಹಕಾರ ನೀಡುವಂತೆ ಮುಖಂಡರಿಗೆ ಸೂಚಿಸಲಾಯಿತು.ಯಾವುದೇ ಸಮಸ್ಯೆ ಅಥವಾ ಅನುಮಾನಾಸ್ಪದ ಚಟುವಟಿ-ಕೆ ಕಂಡುಬಂದಲ್ಲಿ ಕೂಡಲೇ ಪೊಲೀಸರ ಗಮನಕ್ಕೆ ತರುವಂತೆ ಪಿಎಸ್ಐ ಅವರು ಸಾರ್ವಜನಿಕರಿಗೆ ಸಲಹೆ ನೀಡಿದರು.ಗ್ರಾಮದಲ್ಲಿ ಹಬ್ಬಗಳ ಸಂದರ್ಭದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಲ್ಲರೂ ಒಗ್ಗಟ್ಟಿನಿಂದ ಸಹಕರಿಸುವುದಾಗಿ ಮುಖಂಡರು ಹಾಗೂ ಸಾರ್ವಜನಿಕರು ಭರವಸೆ ನೀಡಿದರು."ಹಬ್ಬಗಳು ಸಂತೋಷದ ಸಂಕೇತವಾಗಲಿ, ಸೌಹಾರ್ದತೆ ನಮ್ಮೆಲ್ಲರ ಶಕ್ತಿಯಾಗಲಿ" ಎಂಬ ಸಂದೇಶದೊಂದಿಗೆ ಶಾಂತಿ ಸಭೆ ಮುಕ್ತಾಯಗೊಂಡಿತು.

# ಈದ್ ಮಿಲಾದ್ ಹಬ್ಬವನ್ನು ಶಾಂತರೀತಿಯಿಂದ ಆಚರಿಸಿ: PSI ಖೋತ

ನೈಜ್ಯ ದೆಸೆ ನ್ಯೂಸ್



ತಾಳಿಕೋಟಿ: ಹಜರತ್ ಮಹಮ್ಮದ್ ಪೈಗಂಬರ್ ಅವರ ಜನ್ಮದಿನದ ಸ್ಮರಣಾಥ-ರ್ವಾಗಿ ಆ. 26 ರಂದು ಆಚರಿಸಲಾಗುವ ಈದ್-ಮಿಲಾದ್ ಹಬ್ಬವನ್ನು ಪಟ್ಟಣದಲ್ಲಿ ಶಾಂತಿ ಹಾಗೂ ಸೌಹಾರ್ದತೆಯಿಂದ ಆರಿಸುವಂತೆ PSI ಜ್ಯೋತಿ ಖೋತ ಹೇಳಿದರು. ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಈದ್-ಮೀಲಾದ್ ಹಬ್ಬದ ನಿಮಿತ್ಯ ಭಾನುವಾರ ಕರೆಯಲಾದ ಶಾಂತಿ ಪಾಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಈದ್- ಮೀಲಾದ್ ಹಬ್ಬವು ಪ್ರೀತಿ,ಸಹೋದರತೆ, ಶಾಂತಿ ಹಾಗೂ ಸೌಹಾರ್ದತೆಯ ಸಂದೇಶ ಸಾರುವ ಹಬ್ಬವಾಗಿದೆ. ಎಲ್ಲ ಸಮುದಾಯದ ಜನರನ್ನು ಜೊತೆಗೂಡಿಸಿಕೊಂಡು ಪರಸ್ಪರ ಗೌರವ ಹಾಗೂ ಸಹಬಾಳ್ವೆಯಿಂದ ಈ ಹಬ್ಬವನ್ನು ಆಚರಿಸಲು ಪ್ರಯತ್ನಿಸಬೇಕು. ಹಬ್ಬದ ಸಂದರ್ಭದಲ್ಲಿ ಯಾವ ಕಾರಣಕ್ಕೂ ಕಾನೂನು ಸುವ್ಯವಸ್ಥೆ ಕೆಡದಂತೆ ನೋಡಿಕೊಳ್ಳಬೇಕು. ಪಟ್ಟಣದಲ್ಲಿ ಕೆಲವು ವರ್ಷಗಳಿಂದ ಈದ್ ಮಿಲಾದ್ ಹಬ್ಬದ ದಿನದಂದು ಯಾವುದೇ ರೀತಿಯ ದೊಡ್ಡ ಪ್ರಮಾಣದ ಮೆರವಣಿಗೆಗಳನ್ನು ನಡೆಸದೇ ಕೇವಲ ಸಣ್ಣ ಸಣ್ಣ ಕಾರ್ಯಕ್ರಮಗಳ ಮೂಲಕ ಹಬ್ಬವನ್ನು ಅಥ-ರ್ಪೂರ್ಣವಾಗಿ ಆಚ-ರಿಸುತ್ತಿರುವುದು ಸಂತೋಷದ ವಿಷಯವಾಗಿದೆ. ಪಟ್ಟಣದಲ್ಲಿ ಆಚರಿಸುವ ಎಲ್ಲ ಹಬ್ಬಗಳನ್ನು ಎಲ್ಲ ಸಮಾಜದವರು ಪರಸ್ಪರ ಸಹಕರಿಸಿಕೊಂಡು ಆಚ-ರಿಸುತ್ತಿದ್ದೀರಿ ಈ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುವ ಅಗತ್ಯ ಇದೆ ಎಂದರು. ಸಮಾಜದ ಪ್ರಮುಖರಾದ ಮೋದಿನಸಾ ನಗಾರ್ಚಿ ಅವರು ಮಾತನಾಡಿ ಪಟ್ಟಣದಲ್ಲಿ ನಾವು ಎಲ್ಲ ಸಮಾಜದವರು ಕೂಡಿಕೊಂಡು ಪರಸ್ಪರ ಸೌಹಾರ್ದತೆಯಿಂದ ಹಬ್ಬಗಳನ್ನು ಆಚರಿಸುತ್ತೇವೆ. ಪಟ್ಟಣದಲ್ಲಿ ಈದ್ ಮಿಲಾದ್ ಆಚರಣೆಯ ಯಾವುದೇ ದೊಡ್ಡ ಕಾರ್ಯಕ್ರಮಗಳು ಇರುವುದಿಲ್ಲ ಕೇವಲ ಮೂರು ಬಡಾವಣೆಗಳಲ್ಲಿ ಸಿಹಿ ವಿತರಣೆಯ ಕಾರ್ಯಕ್ರಮಗಳನ್ನು ನಮ್ಮ ಯುವಕರು ಹಮ್ಮಿಕೊಂಡಿದ್ದಾರೆ ಇವುಗಳನ್ನು ಸಹ ಶಾಂತ ರೀತಿಯಿಂದ ನಡೆಸಲಾಗುವುದು ಎಂದರು. ಶಾಂತಿ ಸಭೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹೆಬೂಬ ಚೋರ ಗಸ್ತಿ, ಕಾಂಗ್ರೆಸ್ ಯುವ ಮುಖಂಡ ಫಯಾಜ್ ಉತ್ನಾಳ, ಉಸ್ಮಾನ ಪಟೇಲ ಮೂಕಿಹಾಳ, ಸಮಾಜ ಸೇವಕರಾದ ಮೊಹಮ್ಮದ್ ಶಫೀಕ ಇನಾಮದಾರ, ನದೀಮ ಕಡು, ಎಎ□□□ಗಳಾದ ಆರ್ ಎಸ್ ಭಂಗಿ, ಬಿ.ಜಿ.ಬಲಕಲ್, ಸಿಬ್ಬಂದಿಗಳಾದ ಎಂಎಲ್ ಪಟ್ಟೇದ, ಸಿದ್ದನಗೌಡ ದೊಡ್ಡಮನಿ, ಪ್ರಭುಗೌಡ ಎಸ್ ಜಿ, ಎಸ್ ಎಸ್ ಗಿರಿಸಾಗರ, ಸೈಪನ್ ಕುರಿ, ಬಿ.ಎಸ್. ಬೀಳಗಿ, ವೀರೇಶ ಬಿರಾದಾರ, ರವಿ ಬಿರಾದಾರ, ಬಸವರಾಜ ಹಡಗಲಿ ಮತ್ತಿತರರು ಇದ್ದರು.

## ನೇಮಕಾತಿ ಪ್ರಕಟಣೆ

ಉತ್ತರ ಕನ್ನಡ ಜಿಲ್ಲಾ ನ್ಯಾಯಾಲಯ ನೇಮಕಾತಿ 2026: ಪ್ರೊಸೆಸ್ ಸರ್ವರ್ (Process Server) ಮತ್ತು ಜವಾನ (Peon) ಹುದ್ದೆಗಳ ಒಟ್ಟು 78 ಖಾಲಿ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಉತ್ತರ ಕನ್ನಡ ಜಿಲ್ಲಾ ನ್ಯಾಯಾಲಯವು ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ ಪ್ರೊಸೆಸ್ ಸರ್ವರ್ ಮತ್ತು ಜವಾನ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಉತ್ತರ ಕನ್ನಡದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 16–ಸೆಪ್ಟೆಂಬರ್–2026 ರೊಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.ಸಂಸ್ಥೆಯ ಹೆಸರು: ಉತ್ತರ ಕನ್ನಡ ಜಿಲ್ಲಾ ನ್ಯಾಯಾಲಯ ಹುದ್ದೆಗಳ ಸಂಖ್ಯೆ: 78 ಉದ್ಯೋಗ ಸ್ಥಳ: ಉತ್ತರ ಕನ್ನಡ – ಕರ್ನಾಟಕ ಹುದ್ದೆಯ ಹೆಸರು: ಪ್ರೊಸೆಸ್ ಸರ್ವರ್, ಜವಾನ (Peon) ವೇತನ: ತಿಂಗಳಿಗೆ ರೂ. 27,000 – 61,300/– ಅರ್ಹತೆಯ ವಿವರಗಳು: ಅಭ್ಯರ್ಥಿಗಳು 10ನೇ ತರಗತಿ / ಖಖಐಅ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 16–ಸೆಪ್ಟೆಂಬರ್–2026. ಅಧಿಕೃತ ವೆಬ್‌ಸೈಟ್: uttarakannada.dcourts.gov.in

# ಮಾಡ್ನಾಳ್ ಬಳಿ ಭೀಕರ ಅಪಘಾತ: ಬುಲೆರೋ ಗೂಡ್ಸ್ ವಾಹನದಲ್ಲಿ ಕೂಲಿ ಕಾರ್ಮಿಕರು: ಮೂರು ಸಾವು!

❑ ನೈಜ್ಯ ದೆಸೆ ನ್ಯೂಸ್

ಯಾದಗಿರಿ: ಜಿಲ್ಲೆಯ ಶಹಾಪುರ ತಾಲೂಕಿನ ಭೀಮರಾಯನ ಗುಡಿ ಪೊಲೀಸ್ ಠಾಣಾ ವ್ಯಾಪ್ತಿಯ ಮಾಡ್ನಾಳ್ ಗ್ರಾಮದ ಸಮೀಪ ಇಂದು ಬೆಳಗ್ಗೆ ಭೀಕರ ಅಪಘಾತ ಸಂಭವಿಸಿದ್ದು. ಮೂರು ಜನ ಮೃತಪಟ್ಟಿದ್ದಾರೆ. ಮೂರರಿಂದ ಐದು ಜನಕ್ಕೆ ಗಾಯಗಳಾಗಿದ್ದು. ಗಾಯಾಳುಗಳನ್ನು ಹೆಚ್ಚಿನ ಚಿಕಿತ್ಸೆಗಾಗಿ ಶಹಪುರ ಆಸ್ಪತ್ರೆಗೆ ಹಾಗೂ ಯಾದಗಿರಿ ಗುಲ್ಬರ್ಗ ಜಿಲ್ಲಾ ಆಸ್ಪತ್ರೆಗಳಿಗೆ ಕಳಿಸಲಾಗಿದೆ. ಎಂದು ಮಾಹಿತಿ ಲಭ್ಯವಾಗಿದೆ. ಮಾಡ್ನಾಳ್ ಹಾಗೂ ಹಳೆಯ ಸಗರ್ ಗ್ರಾಮದ ಕೂಲಿ ಕಾರ್ಮಿಕರು ಕೆಲಸ ಮುಗಿಸಿಕೊಂಡು ವಾಪಸ್ ಮನೆಗೆ ಮರಳುತ್ತಿರುವಾಗ ಈ ದುರ್ಘಟನೆ ಸಂಭವಿಸಿದೆ ಎನ್ನಲಾಗಿದೆ. ಅಪಘಾತ ಕೇಡಾದವ ವಾಹನದ ವಿವರ.ಇಚಿ–33 ಛ–5139 ನೋಂದಣಿಯ ಸಂಖ್ಯೆ ಯ ಬುಲೆರೋ ಗೋಡ್ಸುವ ವಾಹನ



ಚಾಲಕನ ನಿಯಂತ್ರಣ ತಪ್ಪಿ. ವಿದ್ಯುತ್ತು ಕಂಬಕ್ಕೆ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಮೂರು ವಿದ್ಯುತ್ ಕಂಬಗಳು ಮುರೆದು ನೆಲಕ್ಕೆ ಉರುಳಿವೆ. ಬಳಿಕ ವಾಹನವು ಬಿದ್ದಿದ್ದ ಕಂಬಕ್ಕೆ ಡಿಕ್ಕಿ ಪಡೆದು ನಿಂತಿದೆ ಎಂದು ಮಾಹಿತಿ ತಿಳಿದು ಬಂದಿದೆ. ಮೃತಪಟ್ಟ ವ್ಯಕ್ತಿಗಳ ಹೆಸರು. ಹೊನ್ನ ನಿಂಗಮ್ಮ (15) ವಿದ್ಯಾರ್ಥಿನಿ. ಸತ್ಯಮ್ಮ(35) ಮಾಡ್ನಾಳಸೌಭಾಗ್ಯ (30) ಮಾಡ್ನಾಳಎಂದು ಗುರುತಿಸಲಾಗಿದೆ. ಸತ್ಯಂ ಅವರ 13 ವರ್ಷದ ಪುತ್ರ ಚಂದ್ರು ಅವರ ತಲೆಗೆ ಗಂಭೀರವಾಗಿ ಗಾಯ ಆಗಿದ್ದು. ಕಲಬುರಗಿಯ ಆಸ್ಪತ್ರೆಗೆ ಕರೆಯೋದುಯಲಾಗಿದೆ. ಇನ್ನೊಂದು ವಿಪ್ರಸವೇನಂದರೆ. 13 ವರ್ಷದ ಯುವಕ ಬೊಲೆರೋ ಪಿಕಪ್ ವಾಹನವನ್ನು ನಡೆಸುತ್ತಿದ್ದ ಎಂದು ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ. ಹಾಗೆ 15 ವರ್ಷದ ಹೊನ್ನು ನಿಂಗಮ್ಮ ವಿದ್ಯಾರ್ಥಿನಿಯಾಗಿದ್ದು. ವಿದ್ಯಾರ್ಥಿನಿಯ ಮನೆಯವರು ಬಹಳ ಬಡವರಾಗಿದ್ದ ಕಾರಣ ಭಾನುವಾರ ರಜೆ ಇರುವ ಸಲುವಾಗಿ ವಿದ್ಯಾರ್ಥಿನಿಯು ಕೂಲಿ ಕೆಲಸಕ್ಕೆ ಎಂದು ತೆರಳಿದಳು. ಆದರೆ ವಿಧಿಯಾಟವೇ ಬೇರೆಯಾಗಿ–ತ್ತು. ಇನ್ನು ಮುಂದೆಯಾದರೂ ಪೊಲೀಸ ಅಧಿಕಾ–ರಿಗಳು. ಹಾಗೂ ಆರ್ ಟಿ ಓ ಇಲಾಖೆ ಅಧಿಕಾ–ರಿಗಳು ಗೂಡ್ಸ್ ವಾಹನದಲ್ಲಿ ಕೂಲಿಕಾರ್ಮಿಕರು ಮತ್ತು ಸಾರ್ವಜನಿಕರನ್ನು ಕರೆದುಕೊಂಡು ಹೋಗುವುದನ್ನು ನಿಲ್ಲಿಸಬೇಕು. ಹಾಗೆ 20 ವರ್ಷದ ಕೆಳಗಿರುವ ವ್ಯಕ್ತಿಗಳು ಡ್ರೈವಿಂಗ್ ಮಾಡುತ್ತಿದ್ದಾರೆ ಅದನ್ನು ತಡೆಗಟ್ಟಬೇಕೆಂದು ಸಾರ್ವಜನಿಕರು ಪೊಲೀಸ್ ಇಲಾಖೆಯ ವಿರುದ್ಧ ಮತ್ತು ಆರ್ ಟಿ ಓ ಇಲಾಖೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇನ್ನು ಮುಂದೆಯಾದರೂ ಇಂಥ ಘಟನೆಗಳು ನಡೆಯಬಾರದೆಂದು ಪೊಲೀಸ್ ಇಲಾಖೆಗೆ ಎಚ್ಚರಿಕೆ ನೀಡಿದರು .ಒಂದು ವೇಳೆ ನಮ್ಮ ಮನವಿಗೆ ವಿರೋಧವಾಗಿ ಕೆಲಸ ಮಾಡಿದರೆ ಉಗ್ರ ಹೋರಾಟ ಮಾಡಲಾಗುವುದೆಂದು ಎಚ್ಚರಿಸಿದರು. ಇದೇ ಸಂದರ್ಭದಲ್ಲಿ. ಬಿಜೆಪಿ ಯಾದಗಿರಿ ಜಿಲ್ಲಾ ಮಾಜಿ ಅಧ್ಯಕ್ಷರಾದ ಶ್ರೀ ಅಮಿನ್ ರೆಡ್ಡಿ ಪಾಟೀಲ್ ಯಾಳಗಿ ಅವರ ಆಗಮಿಸಿ. ಗಾಯಾಳುಗಳ ಆರೋಗ್ಯವನ್ನು ವಿಚಾರಿಸಿದರು. ಮತ್ತು ಮೃತಪಟ್ಟ ವ್ಯಕ್ತಿಗಳ ಕುಟುಂಬ ಸದಸ್ಯರಿಗೆ ಸಾಂತ್ವಾನವನ್ನು ಹೇಳಿದರು.

## ರಾಣಿ ಕೊಲೆ ಪ್ರಕರಣದ ಆರೋಪಿ ಬಂಧನ

❑ ನೈಜ್ಯ ದೆಸೆ ನ್ಯೂಸ್



ಲಿಂಗಸಗೂರು : ಆ 24 – ಪುರಸಭೆ ವ್ಯಾಪ್ತಿಯ ಕರಡಕಲ್ ಗ್ರಾಮದ ರಾಣಿ ಕೊಲೆ ಪ್ರಕರಣವನ್ನು ಪೊಲೀಸರು ಅತ್ಯಂತ ಗಂಭೀರವಾಗಿ ಪರಿಗಣಿಸಿ ತನಿಖೆ ನಡೆಸಿದ್ದು, ಪ್ರಕರಣದ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಡಿವೈಎಸ್‌ಪಿ ದತ್ತಾತ್ರೇಯ ಕಾರ್ನಾಡ್ ಅವರು ಪ್ರಕರಣವನ್ನು ಬೆನ್ನತ್ತಿದ ಪೊಲೀಸ್ ತಂಡದೊಂದಿಗೆ ನಿರಂತರ ತನಿಖೆ ನಡೆಸಿ ಆರೋಪಿ ನೀರಲಕೇರಿ ಗ್ರಾಮದ ಅಮರೇಶ ಗಾಣಿಗರನನ್ನು ಬಂಧಿಸಿದ್ದಾರೆ.ಅಮರೇಶ ಗಾಣಿಗ ಅ.19ರಂದು ರಾಣಿ ಮನೆಯಿಂದ ಹೊರಗೆ ತೆರಳಿದ ಬಳಿಕ ಅವರ ಮೃತದೇಹ ಜಾಲಿಬೆಂಚಿ ಗ್ರಾಮದ ಹೊರವಲಯದ ಹೊಲದಲ್ಲಿ ಪತ್ತೆಯಾಗಿತ್ತು. ಈ ಕುರಿತು ಪ್ರಕರಣ ದಾಖಲಿಸಿಕೊಂಡ ಪೊಲೀಸರು ತಕ್ಷಣವೇ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ರಾಣಿಯ ಚಲನವಲನ, ಆಕೆಯ ಪರಿಚಯಸ್ಥರು ಹಾಗೂ ಘಟನೆಗೆ ಸಂಬಂಧಿಸಿದ ಇತರ ಪ್ರಮುಖ ಮಾಹಿತಿಗಳನ್ನು ಕಲೆಹಾಕಿದ್ದರು. ತನಿಖೆ ಮುಂದುವರಿದಂತೆ ದೊರೆತ ಸಾಕ್ಷ್ಯಗಳು ಹಾಗೂ ಸಾಕ್ಷಿದಾರರ ಹೇಳಿಕೆಗಳ ಆಧಾರದ ಮೇಲೆ ಪೊಲೀಸರು ನೀರಲಕೇರಿ ಗ್ರಾಮದ ಅಮರೇಶ ಗಾಣಿಗನ ಮೇಲೆ ತೀವ್ರ ಅನುಮಾನ ವ್ಯಕ್ತಪಡಿಸಿ, ಆತನ ಚಲನವಲನದ ಜಾಡು ಹಿಡಿದು ತನಿಖೆ ತೀವ್ರಗೊಳಿಸಿದರು, ತನಿಖೆಯ ವೇಳೆ ದೊರೆತ ಪೂರಕ ಹೇಳಿಕೆಗಳಲ್ಲಿ ಅಮರೇಶನು ರಾಣಿಯನ್ನು ಮೋಟಾರ್‌ಸೈಕಲ್‌ನಲ್ಲಿ ಕರೆದುಕೊಂಡು ಹೋಗಿದ್ದನ್ನು ಕಂಡಿರುವುದಾಗಿ ಪ್ರತ್ಯಕ್ಷದರ್ಶಿ ಸಾಕ್ಷಿಗಳು ತಿಳಿಸಿದ್ದಾರೆ. ಅಲ್ಲದೆ, ಹೊಲದ ಬಳಿ ರಾಣಿಯ ಮೇಲೆ ಕಲ್ಲಿನಿಂದ ಹಲ್ಲೆ ನಡೆಸುತ್ತಿದ್ದುದನ್ನು ಕಂಡಿರುವುದಾಗಿ ಮತ್ತೊಬ್ಬ ಸಾಕ್ಷಿ ನೀಡಿದ ಹೇಳಿಕೆ ಪ್ರಕರಣದ ತನಿಖೆಗೆ ಅತ್ಯಂತ ಪ್ರಮುಖ ಸುಳಿವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.ಎಸ್‌ಸಿ/ಎಸ್‌ಟಿ ಕಾಯ್ದೆಯಡಿ ಪ್ರಕರಣ:ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ಸಂಬಂಧಿತ ಕಲಂಗಳನ್ನು ಕೂಡ ಅಳವಡಿಸಿಕೊಳ್ಳಲಾಗಿದೆ.ಪ್ರಕರಣದ ತನಿಖೆಯನ್ನು ನಿರಂತರವಾಗಿ ಬೆನ್ನತ್ತಿದ ಡಿವೈಎಸ್‌ಪಿ ದತ್ತಾತ್ರೇಯ ಕಾರ್ನಾಡ್ ನೇತೃತ್ವದ ಪೊಲೀಸ್ ತಂಡವು ಆರೋಪಿಯನ್ನು ಪತ್ತೆಹಚ್ಚಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತ ಆರೋಪಿ ಅಮರೇಶನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣವನ್ನು ಭೇದಿಸಿ ಆರೋಪಿಯನ್ನು ಬಂಧಿಸುವಲ್ಲಿ ಯಶಸ್ವಿಯಾದ ಡಿವೈಎಸ್‌ಪಿ ದತ್ತಾತ್ರೇಯ ಕಾರ್ನಾಡ್ ಹಾಗೂ ಪೊಲೀಸ್ ಸಿಬ್ಬಂದಿಯ ಕಾರ್ಯಕ್ಕೆ ಸಾರ್ವಜನಿಕರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಪ್ರಕರಣದ ಮುಂದಿನ ತನಿಖೆ ಹಾಗೂ ಕಾನೂನು ಕ್ರಮ ಮುಂದುವರಿದಿದೆ.

# ಭೂಮಾನಂದ ಕೊಲೆ ಪ್ರಕರಣ: ಸಮಗ್ರ ತನಿಖೆಗೆ ಆಗ್ರಹಿಸಿ ಜಾಲಹಳ್ಳಿಯಿಂದ ರಾಯಚೂರಿಗೆ ಬೃಹತ್ ಬೈಕ್ ರ‍್ಯಾಲಿಗೆ ಚಾಲನೆ

❑ ನೈಜ್ಯ ದೆಸೆ ನ್ಯೂಸ್

ಜಾಲಹಳ್ಳಿ/ರಾಯಚೂರು, ಆ.23: ದೇವದುರ್ಗ ತಾಲೂಕಿನ ಹದ್ದಿನಾಳ ಗ್ರಾಮದ ಬಹುಜನ ಮುಖಂಡ ಭೂಮಾನಂದ ಅವರ ಬರ್ಬರ ಹತ್ಯೆ ಪ್ರಕರಣದ ಸಮಗ್ರ ತನಿಖೆ ನಡೆಸಿ, ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲ ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಆಗ್ರಹಿಸಿ 'ಬಹುಜನ ಮುಖಂಡ ಭೂಮಾನಂದನ ಕಗ್ಗೊಲೆ ವಿರೋಧಿ ಒಕ್ಕೂಟ'ದ ನೇತೃತ್ವದಲ್ಲಿ ಬೃಹತ್ ಜನಾಂದೋಲನ ಆರಂಭಗೊಂಡಿದೆ.ಆ.23ರಂದು ಜಾಲಹಳ್ಳಿ ಗ್ರಾಮದ ಅಂಬೇಡ್ಕರ್ ವೃತ್ತದಿಂದ ಬೈಕ್ ರ‍್ಯಾಲಿಗೆ ಹಿರಿಯ ಮುಖಂಡ ಸಾಬಣ್ಣ ಕಮಲದಿನ್ನಿ ಚಾಲನೆ ನೀಡಿದರು. ಹದ್ದಿನಾಳ ಗ್ರಾಮದಿಂದ ಆರಂಭಗೊಂಡ 'ಸಂವಿಧಾನದ ಶಾಂತಿಯಾತ್ರೆ' ಬೈಕ್ ರ‍್ಯಾಲಿ ಗಬ್ಬೂರು, ಕಲ್ಲೂರು ಹಾಗೂ ಅಸ್ಕಿಹಾಳ ಮಾರ್ಗವಾಗಿ ರಾಯಚೂರಿನತ್ತ ಸಾಗಿ–ತು.ಆ.24ರಂದು ಅಸ್ಕಿಹಾಳದಿಂದ ರಾಯಚೂರು ನಗರದ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದವರೆಗೆ ಬೃಹತ್ ಪಾದಯಾತ್ರೆ ನಡೆಸಿ, ಬಳಿಕ ಬಹಿರಂಗ ಸಮಾವೇಶ ಹಮ್ಮಿಕೊಳ್ಳಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳ ಮುಖಂಡರು, ನ್ಯಾಯವಾದಿಗಳು ಹಾಗೂ ಸಾರ್ವಜನಿಕರು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.ಭೂಮಾನಂದ ಬರ್ಬರ ಹತ್ಯೆ ಆ.4ರಂದು ಸಂಜೆ ಸುಮಾರು 7 ಗಂಟೆಗೆ ದೇವದುರ್ಗ ತಾಲೂಕಿನ ಸುಂಕೇಶ್ವರಹಾಳ ಗ್ರಾಮದ ಮುಖ್ಯರಸ್ತೆಯಲ್ಲಿ ಭೂಮಾನಂದ ಅವರನ್ನು ಅಡ್ಡಗಟ್ಟಿದ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಬರ್ಬರವಾಗಿ ಹತ್ಯೆ ಮಾಡಿದ್ದಾರೆ ಎಂದು ಸಂಘಟನೆಗಳು



ಆರೋಪಿಸಿವೆ.ಭೂಮಾನಂದ ಅವರು ತಮ್ಮ ಎಂಟು ತಿಂಗಳ ಗರ್ಭಿಣಿ ಪತ್ನಿ ಗೌರಮ್ಮ ಅವರನ್ನು ರಾಯಚೂರಿನ ಆಸ್ಪತ್ರೆಗೆ ತಪಾಸಣೆಗೆ ಕರೆದುಕೊಂಡು ಹೋಗಿ, ಬಳಿಕ ಹದ್ದಿನಾಳ ಗ್ರಾಮಕ್ಕೆ ಮರಳಿದ್ದರು ಎನ್ನಲಾಗಿದೆ. ಪತ್ನಿಯನ್ನು ಸುರಕ್ಷಿತವಾಗಿ ಮನೆಗೆ ತಲುಪಿಸಿದ ಬಳಿಕ ಹೊರಬಂದ ಭೂಮಾನಂದ ಅವರನ್ನು ಸುಂಕೇಶ್ವರಹಾಳ ಬಳಿ ಅಡ್ಡಗಟ್ಟಿ ದಾಳಿ ನಡೆಸಲಾಗಿದೆ ಎಂದು ಸ್ಥಳೀಯರು ತಿಳಿಸಿದ್ದಾರೆ.ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ದೇವರಾಜ ಅಲಿಯಾಸ್ ದೇವ ಸೇ–ರಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಆದರೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಉಳಿದ ಆರೋಪಿಗಳ ಬಂಧನದಲ್ಲಿ ವಿಳಂಬವಾಗುತ್ತಿದೆ ಎಂದು ದಲಿತ ಸಂಘಟನೆಗಳು ಆರೋಪಿಸಿವೆ.ಸಮಗ್ರ ತನಿಖೆಗೆ ಆಗ್ರಹ ರ‍್ಯಾಲಿಯನ್ನು ಉದ್ದೇಶಿಸಿ ಮಾತನಾಡಿದ ಭೀಮಣ್ಣ ವೀರಗೋಟ ಅವರು, ಭೂಮಾನಂದ ಹತ್ಯೆ ಪ್ರಕರಣದ ಹಿಂದೆ ಯಾರಾದರೂ ಪ್ರಚೋದಕರು ಅಥವಾ ಸುಪಾರಿ ಹಂತಕರ ಕೈವಾಡವಿದೆಯೇ ಎಂಬುದನ್ನು ತನಿಖೆ ನಡೆಸಿ, ಪ್ರಕರಣದ ಸಂಪೂರ್ಣ ಸತ್ಯವನ್ನು ಬಹಿರಂಗಪಡಿಸಬೇಕು ಎಂದು ಆಗ್ರಹಿಸಿದರು.ಈ ಹಿಂದೆ ಕೂಡ ಭೂಮಾನಂದ ಅವರ ಮೇಲೆ ಪ್ರಾಣಾಂತಿಕ ದಾಳಿ ಹಾಗೂ ಅಪಹರಣದ ಯತ್ನಗಳು ನಡೆದಿದ್ದವು ಎಂದು ಸ್ಥಳೀಯರು ಆರೋಪಿಸಿದ್ದು, ಈ ಎಲ್ಲ ಘಟನೆಗಳನ್ನೂ ತನಿಖೆಯ ವ್ಯಾಪ್ತಿಗೆ ತರಬೇಕು ಎಂದು ಒತ್ತಾಯಿಸಿದರು.ಹೆಚ್ಚುವರಿ ಪರಿಹಾರಕ್ಕೆ ಒತ್ತಾಯಹಿರಿಯ ಮುಖಂಡ ಸಾಬಣ್ಣ ಕಮಲದಿನ್ನಿ ಮಾತನಾಡಿ, ಮೃತ ಭೂಮಾನಂದ ಕುಟುಂಬಕ್ಕೆ ಹೆಚ್ಚುವರಿ ಪರಿಹಾರ ನೀಡಬೇಕು. ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ತ್ವರಿತ ಹಾಗೂ ನಿಷ್ಪಕ್ಷಪಾತ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.ಅಲ್ಲದೆ, ಗಬ್ಬೂರು ಪೊಲೀಸ್ ಠಾಣೆಯ ಕೆಲವು ಸಿಬ್ಬಂದಿ ಆರೋಪಿಗಳಿಗೆ ಕುಮ್ಮಕ್ಕು ನೀಡುತ್ತಿದ್ದಾರೆ ಎಂಬ ಆರೋಪಗಳ ಕು–ರಿತು ತನಿಖೆ ನಡೆಸಿ, ಆರೋಪಗಳು ಸಾಬೀತಾದಲ್ಲಿ ಸಂಬಂಧಪಟ್ಟವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.ಅಖಿಇ ಅಜಟಟ ಮೂಲಕ ತನಿಖೆಗೆ ಆಗ್ರಹಬೂತಪ್ಪ ದೇವರಮನಿ ಮಾತನಾಡಿ, ಜಾತಿ ನಿಂದನೆ ಪ್ರಕರಣಗಳ ತನಿಖೆ ನಡೆಸುವ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ (ಅಖಿಇ ಅಜಟಟ) ಮೂಲಕ ಅಗತ್ಯ ಸಿಬ್ಬಂದಿಯನ್ನು ನೇಮಿಸಿ, ಪ್ರಕರಣದ ತನಿಖೆಯನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಆಗ್ರಹಿಸಿದರು.ಬಾಳಪ್ಪ ಬಾವಿಮನಿ ಹಾಗೂ ಮೌನೇಶ್ ಗಾಣದಾಳ ಅವರು ಮಾತನಾಡಿ, ಭೂಮಾನಂದ ಹತ್ಯೆ ಪ್ರಕರಣದ ಸಮಗ್ರ ತನಿಖೆ ನಡೆಸಿ, ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲ ಆರೋಪಿಗಳನ್ನು ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಒತ್ತಾಯಿಸಿದರು.ಮುಖಂಡರ ಉಪಸ್ಥಿತಿಬೈಕ್ ರ‍್ಯಾಲಿಯಲ್ಲಿ ಹಿರಿಯ ದಲಿತ ಮುಖಂಡ ಸಾಬಣ್ಣ, ಮೌನೇಶ್ ಗಾಣದಾಳ, ಬೂತಪ್ಪ ದೇವರಮನಿ, ಭೀಮಣ್ಣ ವೀರಗೋಟ, ಬಾಳಪ್ಪ ಬಾವಿಮನಿ, ನಾಗರಾಜ್ (ಆಖಖ), ಏಸು ಕಮಲದಿನ್ನಿ, ರಾಜು ಜಾಲಹಳ್ಳಿ, ರಮೇಶ್ ಬಾಗೂರು, ದುರಗಪ್ಪ ಜಾಲಹಳ್ಳಿ, ಬಸವ ಬಿ.ಆರ್. ಗುಂಡ ಸೇರಿದಂತೆ ಹಲವು ದಲಿತ ಹಾಗೂ ಪ್ರಗತಿಪರ ಮುಖಂಡರು ಮತ್ತು ಕಾರ್ಯಕರ್ತರು ಭಾಗವಹಿಸಿ ಹೋರಾಟಕ್ಕೆ ಬೆಂಬಲ ಸೂಚಿಸಿದರು. ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

## ಅರಕೇರಾದಿಂದ ಶ್ರೀಶೈಲ ಮಲ್ಲಿಕಾರ್ಜುನ ದೇವರ ದರ್ಶನಕ್ಕೆ ಭಜನೆ ಮೂಲಕ ಭಕ್ತಾದಿಗಳ ಯಾತ್ರೆ

❑ ನೈಜ್ಯ ದೆಸೆ ನ್ಯೂಸ್

ಅರಕೇರಾ – ಪಟ್ಟಣದ ಭಕ್ತ ಸಮೂಹವು ಶ್ರಾವಣ ಮಾಸದ ಪುಣ್ಯ ಸಂದರ್ಭದಲ್ಲಿ ಪ್ರತಿವರ್ಷದಂತೆ ಈ ವರ್ಷವೂ ಸಹ ಶ್ರೀ ಶೈಲ ಮಲ್ಲಿಕಾರ್ಜುನ ದೇವಸ್ಥಾನದತ್ತ ಭಕ್ತಿ ಪೂರ್ವಕ ಯಾತ್ರೆಗೆ ಹೊರಟಿದ ಒಟ್ಟು 21 ಜನ ಭಕ್ತರು ಇಂದು ವಾಹನದ ಮೂಲಕ ದೇವರ ದರ್ಶನಕ್ಕಾಗಿ ತೆರಳಿರು. ಈ ಯಾತ್ರೆಯು ಭಜನೆಗಳ ಮೂಲಕ ನಡೆಯುತ್ತಿರುವದು ವಿಶೇಷಶ್ರೀ ಅಂಜನೇಯ್ಯ ದೇವಸ್ಥಾನದಿಂದ ಭಜನೆ ಆರಂಭಿಸಿದ ಭಕ್ತರು ಮೊದಲು ಗ್ರಾಮದ ಹಾರೈದ ದೇವಿ ಶ್ರೀ ಭಗಮ್ಮದೇವಿ ದೇವಸ್ಥಾನಕ್ಕೆ ತಲುಪಿ ಅಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ನಂತರ ಶ್ರೀ ಮಾರೇಮ್ಮ ದೇವಿದೇವಸ್ಥಾನಕ್ಕೆ ತೆರಳಿ ಅಲ್ಲಿಯೂ ಕೂಡ ಪೂಜೆಯನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಕೆ.ಅನಂತರಾಜನಾಯಕ ಬಿಜೆಪಿ ಹಿರಿಯ ಮುಖಂಡರು ಮತನಾಡಿ ಶ್ರೀ ಮಲ್ಲಿಕಾರ್ಜುನ ದೇವರ ದರ್ಶನಕ್ಕೆ ತೆರಳುತ್ತಿರುವ



ಭಕ್ತರು ಮುಖ್ಯ ಉದ್ದೇಶವು ನಮ್ಮ ಅರಕೇರಾ ಗ್ರಾಮಕ್ಕೆ ಉತ್ತಮ ಮಳೆ ಮತ್ತು ಸಮೃದ್ಧ ಬೆಳೆಗಳು ಬರಲಿ ಎಂಬ ಶುಭ ಉದ್ದೇಶವನ್ನು ಹೊಂದಿದ್ದಾರೆ. ಶ್ರಾವಣ ಮಾಸದಲ್ಲಿ ರೈತರು ದೇವರ ಧ್ಯಾನ ಮಾಡಿ ಮಳೆರಾಯನ ಕೃಪೆಗಾಗಿ ಭಜನೆ ಮತ್ತು ಪ್ರಾರ್ಥನೆ ಮಾಡುತ್ತಾ ತಮ್ಮ ಕಷ್ಟಗಳನ್ನು ಪರಿಹರಿಸಿಕೊಳ್ಳುವಂತೆ ದೇವರ ದರ್ಶನ ಪಡೆಯುವದು ಅನಾಧಿ ಕಾಲದಿಂದಲ್ಲೂ ನಡೆದುಕೊಂಡು ಬಂದಿರುವ ಒಂದು ದಾರ್ಮಿಕ ಮತ್ತು ಸಂಪ್ರಾದಾಯಯಿಕ ಪದ್ಧತಿಯಾಗಿದೆ ಎಂದು ತಿಳಿಸಿದರು, ಕಾಂಗ್ರೆಸ್ ರಾಷ್ಟೀಯ ಕಾರ್ಯದರ್ಶಿ ಶ್ರೀದೇವಿ ರಾಜಶೇಖರನಾಯಕ ಮಾತನಾಡಿ ನಮ್ಮ ಗ್ರಾಮದಲ್ಲಿ ಮಳೆಯ ಕೊರೆತಯಿಂದ ಕಂಗೆಟ್ಟಿದ ಸಂದರ್ಭದಲ್ಲಿ ಭಕ್ತಾದಿಗಳು ರೈತರು ಸೇರಿಕೊಂಡು ಗ್ರಾಮದಲ್ಲಿ ಎಲ್ಲಾ ದೇವಸ್ಥಾನಗಳಿಗೆ ತೆರಳಿ ದೇವರುಗಳಿಗೆ ಗಂಗಾಜಲದಿಂದ ಅಭಿಷೇಕ ವಿಶೇಷ ಪೂಜೆ ಹವನ ಮತ್ತು ದಾರ್ಮಿಕ ಆಚ–'ರಣೆಗಳನ್ನು ನಡೆಸಿ ಪ್ರಾರ್ಥನೆ ಮಾಡಿದರು. ಸಂದರ್ಭದಲ್ಲಿ ಕೂಡಲೇ ಮಳೆಯು ಸುರಿಯಲು ಪ್ರಾರಂಭಿಸಿ ರೈತರಿಗೆ ಅಪಾರ ಅನುಕೂಲವಾಯಿತು ಎಂದು ರೈತರು ಕಾರ್ಯವನ್ನು ಸ್ಮರಿಸಿದರುಕೆ. ಅನಂತರಾಜನಾಯಕ,ಶ್ರೀದೇವಿರಾಜಶೇಖರನಾಯಕ.ಪರಮೇಶಪೂಜಾರಿ,ಹನುಮಂತ್ರಾಯಗೌಡ,ಶೇಖರಪ್ಪಗೌಡಮಾಲಿಪಾಟೀಲ್ ಮಹಾಂತೇಶ ಪೂಜಾರಿ,ಹನುಮಂತ್ರಾಪೂಜಾರಿ, ವೆಂಕೋಬದೊರೆ,ಕೆ.ವಿರೇಶಸಾಹುಕಾರ, ಜಗದೀಶ ಸ್ವಾಮಿ ಗಣೇಚಾರ್ಯ,ಸಿದ್ದಪ್ಪಪೈಕಾರ, ನಿಂಗಪ್ಪಬೊಜೆ,ಬೂದೆಪ್ಪ ಪರಸಲ್, ಬಾಲಗೌಡಸಾತಲ್,ಮುದ್ದಣ್ಣನಾಯಕ ಜಾಲಹಳ್ಳಿ,ಸಾಭಯ್ಯ ಸಿದ್ದಪ್ಪಕಬ್ಬೇರ ಅರಕೇರಾ ಭಕ್ಥಾದಿಗಳು ರೈತರು ಭಾಗವಹಿಸಿದ್ದರು.

# ರೈತರಿಗೆ ಪಂಪ್‌ಸೆಟ್ ವಿತರಣೆ ಮಾಡಿದ ಎನ್.ಎಸ್. ಬೋಸರಾಜು–ಬೋರ್‌ವೆಲ್ ಮೂಲಕ ಕೃಷಿ ಚಟುವಟಿಕೆಗಳಿಗೆ ಉತ್ತೇಜನ

❑ ನೈಜ್ಯ ದೆಸೆ ನ್ಯೂಸ್

ರಾಯಚೂರು,ರೈತರ ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ನೀರಿನ ಸೌಲಭ್ಯ ಕಲ್ಪಿಸುವುದು ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಕೃಷಿ ಕ್ಷೇತ್ರದಲ್ಲಿ ರೈತರು ಹೆಚ್ಚಿನ ಪ್ರಮಾಣದಲ್ಲಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಲು ನೀರಾವರಿ ಸೌಲಭ್ಯ ಅತ್ಯಗತ್ಯವಾಗಿದ್ದು, ಈ ನಿಟ್ಟಿನಲ್ಲಿ ಬೋರ್‌ವೆಲ್‌ಗಳ ಮೂಲಕ ನೀರಿನ ಸೌಲಭ್ಯ ಕಲ್ಪಿಸುವ ಕಾರ್ಯಕ್ಕೆ ಆದ್ಯತೆ ನೀಡಲಾಗುತ್ತಿದೆ ಎಂದು ಮಾಜಿ ಸಚಿವ ಹಾಗೂ ಹಾಲಿ ವಿಧಾನ ಪರಿಷತ್ ಸದಸ್ಯ ಎನ್.ಎಸ್. ಬೋಸರಾಜು ಹೇಳಿದರು.ರೈತರ ಬೇಡಿಕೆ ಹಾಗೂ ಅಗತ್ಯಕ್ಕೆ ಅನುಗುಣವಾಗಿ ಬೋರ್‌ವೆಲ್‌ಗಳನ್ನು ಮಂಜೂರು ಮಾಡಲಾಗಿದ್ದು, ಬೋರ್‌ವೆಲ್‌ಗಳಿಂದ ನೀರನ್ನು ಕೃಷಿ ಜಮೀನುಗಳಿಗೆ ಪೂರೈಸಲು ಪಂಪ್‌ಸೆಟ್‌ಗಳ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅರ್ಹ ರೈತ ಫಲಾನುಭವಿಗಳಿಗೆ ಪಂಪ್‌ಸೆಟ್‌ಗಳನ್ನು ವಿತರಿಸಲಾಗುತ್ತಿದೆ. ಇದರಿಂದ ರೈತರು ತಮ್ಮ ಜಮೀನುಗಳಲ್ಲಿ ಸಮರ್ಪಕವಾಗಿ ನೀರಾವರಿ ಮಾಡಿಕೊಂಡು ಕೃಷಿ ಉತ್ಪಾದನೆ ಹೆಚ್ಚಿಸಿಕೊಳ್ಳಲು ಅನುಕೂಲವಾಗಲಿದೆ ಎಂದು ತಿಳಿಸಿದರು.



ಕೃಷಿ ಕ್ಷೇತ್ರದಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ನೀರಾವರಿ ಸೌಲಭ್ಯಗಳ ವಿಸ್ತರಣೆಗೆ ಹೆಚ್ಚಿನ ಆದ್ಯತೆ ನೀಡಬೇಕಾಗಿದೆ. ಬೋರ್‌ವೆಲ್ ಸೌಲಭ್ಯ ದೊರೆತಿ–ರುವ ರೈತರಿಗೆ ಪಂಪ್‌ಸೆಟ್ ಸೇರಿದಂತೆ ಅಗತ್ಯ ಪರಿಕರಗಳನ್ನು ಒದಗಿಸುವುದರಿಂದ ಜಮೀನುಗಳಿಗೆ ಸಮರ್ಪಕವಾಗಿ ನೀರು ಪೂರೈಸಲು ಸಾಧ್ಯವಾಗುತ್ತದೆ. ಇದರಿಂದ ರೈತರು ಮಳೆ ಅವಲಂಬನೆ ಕಡಿಮೆ ಮಾಡಿಕೊಂಡು ವರ್ಷವಿಡೀ ವಿವಿಧ ಬೆಳೆಗಳನ್ನು ಬೆಳೆಯಲು ಅನುಕೂಲವಾಗಲಿದೆ. ರೈತರ ಆದಾಯ ಹೆಚ್ಚಿಸುವ ಮೂಲಕ ಅವರ ಜೀವನಮಟ್ಟ ಸುಧಾರಿಸುವುದು ತಮ್ಮ ಉದ್ದೇಶವಾಗಿದೆ ಎಂದು ಎನ್.ಎಸ್. ಬೋಸರಾಜು ಹೇಳಿದರು. ರೈತರ ಆರ್ಥಿಕ ಪರಿಸ್ಥಿತಿ ಸುಧಾರಿಸಲು ಹಾಗೂ ಕೃಷಿಯನ್ನು ಲಾಭದಾಯಕವಾಗಿಸಲು ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ನಿರಂತರವಾಗಿ ಪ್ರಯತ್ನಿಸಲಾಗುವುದು. ರೈತರ ಸಮಸ್ಯೆಗಳಿಗೆ ಸ್ಪಂದಿಸಿ, ಅಗತ್ಯ ಸೌಲಭ್ಯಗಳನ್ನು ಒದಗಿಸಲು ಬದ್ಧನಾಗಿದ್ದೇನೆ ಎಂದು ಅವರು ಹೇಳಿದರು.ಈ ಸಂದರ್ಭದಲ್ಲಿ ಕಾಂಗ್ರೆಸ್ ಹಿರಿಯ ಮುಖಂಡರಾದ ಕೆ. ಶಾಂತಪ್ಪ, ಜಯಣ್ಣ, ಮೊಹಮ್ಮದ್ ಶಾಲಂ, ರವಿಪಾಟೀಲ್, ರಾಯಚೂರು ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಬದೊಡ್ಡಿ ಆಂಜನೇಯ್ಯ, ಚುಕ್ಕಿ ಶಿವಕುಮಾರ್, ಅಮರೇಗೌಡ ಹಂಚಿನಾಳ, ತಿಮ್ಮಪ್ಪ ಮ್ಯಾತ್ರಿ, ಮಹದೇವ್, ಬೋಳಬಂಡಿ, ವೀರೇಶ ರಜಲಬಂಡಾ, ಯೇಸು ಸೇರಿದಂತೆ ಹಲವು ರೈತರು ಹಾಗೂ ಮುಖಂಡರು ಉಪಸ್ಥಿತರಿದ್ದರು.

## ವಚನ ದರ್ಶನ


**ದಯವಿಲ್ಲದ ಧರ್ಮವದೇವುದಯ್ಯ,**
**ದಯವೇ ಬೇಕು**
**ಸರ್ವಪ್ರಾಣಿಗಳೆಲ್ಲರಲ್ಲಿ!ದಯವೇ**
**ಧರ್ಮದ ಮೂಲವಯ್ಯ.**
**ಕೂಡಲಸಂಗಯ್ಯನಂತಲ್ಲದೊಲ್ಲ**
**ಕಂಡಯ್ಯ**

ದಯವಿಲ್ಲದ ಧರ್ಮವಾವುದಯ್ಯಾ" ಎಂಬುದು 12ನೇ ಶತಮಾನದ ಸಾಮಾಜಿಕ ಕ್ರಾಂತಿಕಾರಿ, ಜಗಜ್ಯೋತಿ ಶ್ರೀ ವಿಶ್ವಗುರು ಬಸವಣ್ಣನವರು ರಚಿಸಿದ ಅತ್ಯಂತ ಪ್ರಸಿದ್ಧ ವಚನವಾಗಿದೆ. ದಯವೇ ಪ್ರಧಾನ. ಜಗತ್ತಿನಲ್ಲಿ ಕರುಣೆ ಅಥವಾ ದಯೆ ಇಲ್ಲದಿದ್ದರೆ, ಆ ಆಚರಣೆಯನ್ನು ಧರ್ಮ ಎಂದು ಕರೆಯಲು ಸಾಧ್ಯವಿಲ್ಲ.ವಿಶ್ವಪ್ರೇಮ.ಕೇವಲ ಮನುಷ್ಯರಷ್ಟೇ ಅಲ್ಲದೆ, ಭೂಮಿಯ ಮೇಲಿರುವ ಸಕಲ ಜೀವರಾಶಿಗಳ ಮೇಲೂ ಕರುಣೆ ಇರಬೇಕು.ಧರ್ಮದ ಅಡಿಪಾಯ. ಭಗವಂತನಾದ ಕೂಡಲಸಂಗಮದೇವನು ದಯೆಯಿಲ್ಲದ ಯಾವುದೇ ಬಾಹ್ಯ ಆಡಂಬರದ ಆಚರಣೆಗಳನ್ನು ಒಪ್ಪುವುದಿಲ್ಲ.ಮನುಷ್ಯನು ಮನುಷ್ಯನನ್ನಾಗಿ ನೋಗಬೇಕು. ಮನದಲ್ಲಿ ಕತ್ತರೆ ಬಾಯಲ್ಲಿ ಬೆಲ್ಲದ ಹಚ್ಚು ಇದ್ದರೆ ಶರಣರು ಒಪ್ಪುವುದಿಲ್ಲ ದಯೆ ಎನ್ನುವುದು ಬರಿ ಪ್ರಾಣಿಗಳಲ್ಲಿ ಅಷ್ಟೇ ಅಲ್ಲ. ಎಂಬತ್ತನಾಲ್ಕು ಲಕ್ಷ ಜೀವರಾಶಿಗಳಲ್ಲಿಯೂ ದಯೆಬೇಕು ಎನ್ನಬಹುದು ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ
ಸಾಲಿಮಠ ಅಂತರಗಂಗಿ
ಸಿಂಧನೂರು
9980094144

# ಬದುಕಿನ ಸಾರ್ಥಕ ಕ್ಷಣಗಳು. ಪುಟ್ಟದೊಂದು ಅವಲೋಕನ.

❑ ನೈಜ್ಯ ದೆಸೆ ಲೇಖನ




ಜಗದ ನಿಯಮದಲ್ಲಿ ಎಲ್ಲವೂ ನಶ್ವರ, ಈಶ್ವರನ ಆಸರೆಯಲ್ಲಿ ಅನುಭವಿಸುವ ಕ್ಷಣಗಳೇ ಅವಿಸ್ಮರಣೀಯ ಪಾಠಗಳು. ಸುಂದರ ಘಳಿಗೆಗಳೆಂದರೆ ಬಾಲ್ಯದ ಆಟೋಟಗಳು, ಗೆಳೆತನ, ಮುಗ್ಧತೆಯ ಚಿತ್ತಾರಗಳು, ಚೆಲುವಿನ ಒಡನಾಟಗಳು ಎಲ್ಲವೂ ಎಲ್ಲಾ ಕಾಲಕ್ಕೂ ಸಲ್ಲುವುದಿಲ್ಲ ಆದರೇ ಬದುಕಿನ ಪರಿಮಿತಿಯಲ್ಲಿ ಕಾಲ ಸರಿದಂತೆ ಬಂದೋದಗುವ ಶೈಕ್ಷಣಿಕ ಇತಿಮಿತಿಗಳು ಬದುಕನ್ನು ಭಾರವಾಗಿಸುತ್ತಾ ಸಾಗುತ್ತದೆ. ಕಾಲಕ್ಕೆ ತಕ್ಕಂತೆ ಮೆಟ್ಟಿಲುಗಳನ್ನು ಹತ್ತಲೇ ಬೇಕು, ಮುಂದಕ್ಕೆ ಸಾಗಲೇಬೇಕಾದ ಅನಿವಾರ್ಯತೆ ಮನೆ ಮಾಡುತ್ತದೆ. ಹೀಗೆಯೇ ಕಾಲದ ಓಟಕ್ಕೆ ಓಡುತ್ತಾ ಹಿಂದಿನದನ್ನು ಮರೆಯುತ್ತಾ ಮುಂದಿನ ದಿನಗಳ ಬಗ್ಗೆ ಯೋಚಿಸುತ್ತಾ ವಾಸ್ತವವನ್ನೇ ಮರೆತು ದಿನ ಕಳೆದುಬಿಡುತ್ತಿದ್ದೇವೆ.ಸತ್ಯಾಸತ್ಯತೆಯ ಅನ್ವೇಷಣೆಯಲ್ಲಿ ಜೀವನದ ಬಹುಪಾಲು ಸಮಯವನ್ನು ಎಲ್ಲರೂ ಕಳೆಯುತ್ತಾರೆ. ಆದರೆ, ಬಾಲ್ಯದ ಜೀವನದಲ್ಲಿ ಕಳೆದ ಸುಂದರ ಕ್ಷಣಗಳನ್ನು ಅವಿಸ್ಮರಣೀಯ ಘಳಿಗೆಗಳನ್ನಾಗಿ ನೆನಪಿಸಿಕೊಳ್ಳುತ್ತಾ ಕಾಲವನ್ನು ಕಳೆಯುತ್ತಾರೆ ಅಲ್ಲವೇಇದು ವಿಪರ್ಯಾಸವಾದರೂ ಸತ್ಯದ ಸಂಗತಿ.ಮತ್ತೊಮ್ಮೆ ನೀ ಬರಬಾರದೇ ಬಾಲ್ಯವೇ.? ಎಂದು ನಿತ್ಯದ ಜೀವನದಲ್ಲಿ ಹಪಹಪಿಸುವ ಸಹಸ್ರ ಜೀವಗಳಿವೆ. ನೆನಪಿರಲಿ *ಈ ಸಮಯ ಕಳೆದು ಬಿಡುತ್ತದೆ.* ಕೂಡಿಸುವುದು ಗುಣಿಸುವುದು ಭಾಗಿಸುವುದು ಜೀವನದ ಪ್ರತಿಯೊಂದು ಜೀವಿಯ ಜೀವಿತಾವಧಿಯ ಅತಿದೊಡ್ಡ ಜವಾಬ್ದಾರಿಯಾಗಿದೆ. ಇಲ್ಲಿ ಕೂಡಿಸುವುದು ಕೇವಲ ಹಣ ಮಾತ್ರವಲ್ಲ ಸಂಬಂಧಗಳು ಹಾಗೂ ನಮ್ಮ ವೈಚಾರಿಕತೆಯ ವ್ಯಕ್ತಿತ್ವದ ನಿಲುವುಗಳು ಮತ್ತು ಸಂಸ್ಕಾರ ಸಂಸ್ಕೃತಿ ತುಂಬಿದ ನಡೆ ನುಡಿಗಳು. ಇನ್ನೂ ಜೀವಮಾನದಲ್ಲಿ ಗುಣಿಸುವುದು ಎಂದಾಗ ಮಕ್ಕಳಲ್ಲಿನ ಬಾಲ್ಯದ ಜೀವನಕ್ಕೆ ಧಕ್ಕೆಯಾಗದಂತಹ ಸಂಸ್ಕಾರ ನೀಡುವುದು. ಧರ್ಮ ಸಂಸ್ಕೃತಿಯ, ಮಹಾನ್ ಮಾನವೀಯತೆಯ ವಿಷಯಗಳನ್ನು ಅರ್ಥೈಸುವುದು.ಭಾಗಿಸುವುದು ಎಂದಾಗ ಅಷ್ಟಲೋಭಗಳನ್ನು ಬದಿಗೊತ್ತಿ ಅಹಂಕಾರವೆಂಬ ಅಜ್ಞಾನವನ್ನು ತೊಲಗಿಸಿ, ಜ್ಞಾನದ ಪವಿತ್ರ ಜ್ಯೋತಿಯನ್ನು ಬೆಳಗಿಸಿ ಇರುವಿಕೆಯ ವಾಸ್ತವತೆಯನ್ನು ಪರಿಚಯಿಸಿ ಕತ್ತಲಿನಿಂದ ಬೆಳಕಿನೆಡೆಗೆ ಸಾಗಿಸುವುದು. ಇದೇ ಎಲ್ಲಾ ಪಾಲಕರ ಆದ್ಯ ಕರ್ತವ್ಯವಾಗಬೇಕು. ಗಿಡವಾಗಿ ಬಗ್ಗದ್ದು ಮರವಾಗಿ ಬಗ್ಗೀತೇ ಎನ್ನುವಂತೆ ಚಿಗುರಿನಲ್ಲಿ ಇರುವಾಗಲೇ ಎಲ್ಲ ಮನಸ್ಸುಗಳನ್ನು ಹಸನಾಗಿಸಿ ಮಕ್ಕಳ ಮನಸ್ಸುಗಳಲ್ಲಿ ಬಾಂಧವ್ಯಕ್ಕಿಂತ, ಸಂಬಂಧಗಳಿಗಿಂತ ಮಿಗಿಲಾದ ಶಕ್ತಿ ಮತ್ಯಾವುದೂ ಇಲ್ಲ ಎಂಬ ವಿಷಯವನ್ನು ತಿಳಿ ಹೇಳಬೇಕು.ನಿತ್ಯದ ಬದುಕಿನಲ್ಲಿ ಕೇವಲ ಹಣ ಆಸ್ತಿ ಅಂತಸ್ತು ಸಂಪತ್ತನ್ನು ಗಳಿಸುವುದರಲ್ಲಿ ಬದುಕಿನ ಬಹುಪಾಲು ಕಳೆದುಬಿಡುತ್ತೇವೆ ಆದರೆ ಮಕ್ಕಳನ್ನೇ ದೊಡ್ಡ ಆಸ್ತಿಯನ್ನಾಗಿ ಪರಿಚಯಿಸುವುದರಲ್ಲಿ ಎಡವಿ ಬೀಳುತ್ತೇವೆ. ಆದ ಕಾರಣ ನಿತ್ಯವೂ ಕನಿಷ್ಠ ಸಮಯವನಾದರೂ ಮಕ್ಕಳಿಗಾಗಿ ಮೀಸಲಿಟ್ಟು ಅವರೊಂದಿಗೆ ಕಾಲ ಕಳೆದಾಗ ಮಾತ್ರ ನಮ್ಮ ಬದುಕಿನ ನೋವು ನಲಿವು ಕಷ್ಟ ಸುಖ ಎಲ್ಲವನ್ನು ತಿಳಿದುಕೊಂಡು ಮಕ್ಕಳು ತಮ್ಮ ಬದುಕಿನ ಹಾದಿಯಲ್ಲಿ ಯಾವುದೇ ತಪ್ಪಾಗದಂತೆ ಎಚ್ಚರವಹಿಸುತ್ತಾ ಜೀವನ ಸಾಗಿಸುತ್ತಾರೆ.ಬದುಕಿನ ಪ್ರತಿಯೊಂದು ಹೆಜ್ಜೆಯಲ್ಲಿ ಎಡವಿ ಬೀಳುವುದು ಮನುಷ್ಯನ ಸಹಜ ಗುಣ ಇಲ್ಲಿ ಆರೋಗ್ಯ ಸಂಪತ್ತಿಗಿಂತ ಮಿಗಿಲಾದ ಸಂಪತ್ತು ಮತ್ತೊಂದು ಇಲ್ಲ ಎಂಬ ಮಾತಿನಂತೆಯೇ ಜೀವಿಸುವ ಜೀವಿತಾವಧಿಯಲ್ಲಿ ಆರೋಗ್ಯವನ್ನು ಸುರಕ್ಷಿತವಾಗಿಟ್ಟುಕೊಂಡು ತಂದೆ-ತಾಯಿ ಹೆಂಡತಿ ಮಕ್ಕಳೊಂದಿಗೆ ದಿನನಿತ್ಯದ ಒಡನಾಟವನ್ನು ಹಸನಾದ ರೀತಿಯಲ್ಲಿ ಇಟ್ಟುಕೊಂಡು ಬದುಕು ಸಾಗಿಸುತ್ತಾ ಹೋಗಬೇಕು. ನಮಗಾದ ಸಂಕಷ್ಟಗಳನ್ನು ಪರಿಹರಿಸಿಕೊಳ್ಳುತ್ತ, ನಷ್ಟಗಳನ್ನು ಸರಿದೂಗಿಸಿಕೊಳ್ಳುತ್ತ, ನೋವುಗಳನ್ನು ಮರೆಯುತ್ತ ನಲಿವುಗಳನ್ನು ನಿತ್ಯವೂ ನೆನೆಯುತ್ತಾ ಸಾಗಬೇಕು.ದಿನಂಪ್ರತಿ ನಮ್ಮ ಸುತ್ತಮುತ್ತಲಿನ ಜನ, ಪರಿಸರ ಹಾಗೂ ವಾತಾವರಣದಲ್ಲಿ ನಿತ್ಯವೂ ಒಂದಲ್ಲ ಒಂದು ಹೊಸ ವಿಷಯವನ್ನು ಕಲಿಯುತ್ತೇವೆ ಹಾಗೂ ಅನುಭವಿಸುತ್ತಲೇ ಸಾಗುತ್ತೇವೆ. ಬೇಕಾದದ್ದನ್ನು ಪಡೆದು ಬೇಡವಾದುದನ್ನು ಬಿಟ್ಟು ಬದುಕಿನ ಸಾರ್ಥಕ ಕ್ಷಣಗಳನ್ನು ನಿರ್ಭೀತಿಯಿಂದ ಹಾಗೂ ನಿರಾಳತೆಯಿಂದ ಅನುಭವಿಸಬೇಕು ಎಂಬ ಪ್ರೀತಿಯ ಅಂಬೋಣದೊಂದಿಗೆ ನನ್ನ ಪುಟ್ಟ ಬರವಣಿಗೆಗೊಂದು ಪೂರ್ಣವಿರಾಮ ನೀಡುತ್ತೇನೆ.

ಡಾ.ರವಿ ದಾನಿ
ಸಾಂಸ್ಕೃತಿಕ ಹಾಗೂ
ಸಾಮಾಜಿಕ ಚಿಂತಕರು
ಎಸ್ ಎಸ್ ಕೆ ಸಮಾಜ
ಕಾರಟಗಿ ಕೊಪ್ಪಳ.

## ನವದೆಹಲಿಯಲ್ಲಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತೋತ್ಸವ

❑ ನೈಜ್ಯ ದೆಸೆ ನ್ಯೂಸ್



ನವದೆಹಲಿಯ ದೆಹಲಿ ಕರ್ನಾಟಕ ಸಂಘದ ವತಿಯಿಂದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಅಂಗವಾಗಿ ಆಯೋಜಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಗಣ್ಯರು, ಕನ್ನಡಪರ ಸಂಘಟನೆಗಳ ಪ್ರತಿನಿಧಿಗಳು, ಸಮಾಜದ ಮುಖಂಡರು ಹಾಗೂ ಕನ್ನಡಾಭಿಮಾನಿಗಳು ಭಾಗವಹಿಸಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಅಪ್ರತಿಮ ವೀರ ಸೇನಾನಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ದೇಶಭಕ್ತಿ, ಧೈರ್ಯ, ಸಾಹಸ ಹಾಗೂ ತ್ಯಾಗವನ್ನು ಸ್ಮರಿಸಿ ಗೌರವ ನಮನ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಗಣ್ಯರು, ಸಂಗೊಳ್ಳಿ ರಾಯಣ್ಣ ಅವರು ಕಿತ್ತೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಮಹತ್ವದ ಪಾತ್ರವನ್ನು ಸ್ಮರಿಸಿದರು. ಬ್ರಿಟಿಷರ ದಬ್ಬಾಳಿಕೆಯನ್ನು ವಿರೋಧಿಸಿ, ಸ್ವಾಭಿಮಾನ ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಯಣ್ಣ ಅವರ ಜೀವನ ಇಂದಿನ ಯುವ ಪೀಳಿಗೆಗೆ ಶಾಶ್ವತ ಪ್ರೇರಣೆಯಾಗಿದೆ ಎಂದು ಅಭಿಪ್ರಾಯಪಟ್ಟರು.ನವದೆಹಲಿಯಂತಹ ರಾಷ್ಟ್ರ ರಾಜಧಾನಿಯಲ್ಲಿ ಕನ್ನಡಿಗರು ಒಗ್ಗೂಡಿ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಜಯಂತಿಯನ್ನು ಆಚರಿಸಿರುವುದು ಕನ್ನಡ ನಾಡಿನ ವೀರ ಪರಂಪರೆಯನ್ನು ದೇಶದ ಮಟ್ಟದಲ್ಲಿ ಪರಿಚಯಿಸುವ ಮಹತ್ವದ ಹೆಜ್ಜೆಯಾಗಿದೆ. ಇಂತಹ ಕಾರ್ಯಕ್ರಮಗಳು ನಮ್ಮ ಇತಿಹಾಸ, ಸಂಸ್ಕೃತಿ ಮತ್ತು ಮಹನೀಯರ ಆದರ್ಶಗಳನ್ನು ಮುಂದಿನ ಪೀಳಿಗೆಗೆ ತಲುಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಆದರ್ಶ, ದೇಶಪ್ರೇಮ, ಧೈರ್ಯ, ತ್ಯಾಗ ಮತ್ತು ಹೋರಾಟದ ಮನೋಭಾವ ನಮ್ಮೆಲ್ಲರಿಗೂ ಸದಾ ಪ್ರೇರಣೆಯಾಗಲಿ. ಅವರ ಕನಸಿನ ಸ್ವಾಭಿಮಾನಿ, ಏಕತೆಯ ಮತ್ತು ಶಕ್ತಿಶಾಲಿ ಭಾರತ ನಿರ್ಮಾಣಕ್ಕೆ ನಾವೆಲ್ಲರೂ ಕೈಜೋಡಿಸೋಣ ಎಂಬ ಸಂಕಲ್ಪದೊಂದಿಗೆ ಜಯಂತೋತ್ಸವವನ್ನು ಗೌರವಪೂರ್ವಕವಾಗಿ ಆಚರಿಸಲಾಯಿತು.

**ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅಮರರಾಗಲಿ!ವೀರ ಸೇನಾನಿಯ ದೇಶಭಕ್ತಿ ಸದಾ ನಮ್ಮೆಲ್ಲರಿಗೂ ಪ್ರೇರಣೆಯಾಗಲಿ!**

## ಮುಧೋಳದಲ್ಲಿ ಎಲ್‌ಐಸಿ ಪ್ರತಿನಿಧಿಗಳ ಕ್ಷೇಮಾಭಿವೃದ್ಧಿ ವಾರ್ಷಿಕ ಸಭೆ ಅದ್ದೂರಿಯಾಗಿ ಆಚರಣೆ

❑ ನೈಜ್ಯ ದೆಸೆ ನ್ಯೂಸ್




ಮುಧೋಳ: ನಗರದ ಅಂಬೇಡ್ಕರ್ ಭವನದಲ್ಲಿ ಎಲ್‌ಐಸಿ ಪ್ರತಿನಿಧಿಗಳ ಕ್ಷೇಮಾಭಿವೃದ್ಧಿ ವಾರ್ಷಿಕ ಸರ್ವಸಾಧಾರಣ ಸಭೆಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ವಿಭಾಗೀಯ ಪ್ರತಿನಿಧಿಗಳ ಸಂಘದ ಅಧ್ಯಕ್ಷ ಪದ್ಮರಾಜ ತಡಸದ, ಎಲ್‌ಐಸಿ ಪ್ರತಿನಿಧಿಗಳು ನಿಗಮದ ಆಧಾರಸ್ತಂಭಗಳಿದ್ದಂತೆ. ಪ್ರತಿನಿಧಿಗಳ ಶ್ರಮ ಹಾಗೂ ಸೇವೆಯಿಂದ ಸಂಸ್ಥೆಯ ಬೆಳವಣಿಗೆ ಸಾಧ್ಯವಾಗುತ್ತಿದೆ. ಆದ್ದರಿಂದ ನಿಗಮವು ಪ್ರತಿನಿಧಿಗಳ ಕ್ಷೇಮಾಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು. ದೇಶದಲ್ಲಿ ಎಲ್‌ಐಸಿ ಸೇರಿದಂತೆ ಹಲವು ಜೀವ ವಿಮಾ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಎಲ್‌ಐಸಿಗೆ ಕೇಂದ್ರ ಸರ್ಕಾರದ ಸಾರ್ವಭೌಮ ಖಾತರಿ ಇರುವುದರಿಂದ ಪಾಲಿಸಿದಾರರು ಯಾವುದೇ ಆತಂಕಪಡುವ ಅಗತ್ಯವಿಲ್ಲ. ಎಲ್‌ಐಸಿ ಕುರಿತು ನಡೆಯುವ ಅಪಪ್ರಚಾರಗಳಿಗೆ ಕಿವಿಗೊಡದೆ, ನಿಗಮದ ಮೇಲೆ ವಿಶ್ವಾಸವಿಡಬೇಕು ಎಂದು ಅವರು ತಿಳಿಸಿದರು.

ಜಮಖಂಡಿ ಶಾಖೆಯ ಶಾಖಾಧಿಕಾರಿ ಎಲ್. ಎಚ್. ವಿವೇಕಾನಂದ ಮಾತನಾಡಿ, ಪ್ರತಿನಿಧಿಗಳ ಕ್ಷೇಮಾಭಿವೃದ್ಧಿಗೆ ನಿಗಮ ಸದಾ ಕಾಳಜಿ ವಹಿಸುತ್ತಿದೆ. ಪ್ರತಿನಿಧಿಗಳು ಹೊಸ ವ್ಯವಹಾರ ಹಾಗೂ ಆಧುನಿಕ ತಂತ್ರಜ್ಞಾನಗಳ ಬಳಕೆಗೆ ಹೆಚ್ಚಿನ ಒತ್ತು ನೀಡಬೇಕು. ಸಾಲ, ಎಸ್‌ಬಿ ಪಾವತಿ ಹಾಗೂ ವಿವಿಧ ರೀತಿಯ ಕ್ಲೇಮ್‌ಗಳನ್ನು ಮೊಬೈಲ್ ಮೂಲಕವೇ ನಿರ್ವಹಿಸುವಂತಹ ಹಲವು ಸೌಲಭ್ಯಗಳು ಲಭ್ಯವಾಗಿವೆ ಎಂದರು.ಮುಧೋಳ ಶಾಖೆಯ ಶಾಖಾಧಿಕಾರಿ ಕೃಷ್ಣರಾಜ ಪಡಿಯಣ್ಣವರ ಮಾತನಾಡಿ, ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲಿಸಿಗಳನ್ನು ಮಾಡಿಸುವ ಮೂಲಕ ಆರ್ಥಿಕವಾಗಿ ಸಬಲರಾಗಬೇಕು. ಶಿಸ್ತು ಹಾಗೂ ಬದ್ಧತೆಯಿಂದ ಕಾರ್ಯನಿರ್ವಹಿಸಿ ನಿಗಮದ ಅಭಿವೃದ್ಧಿಗೆ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.ಹುಲ್ಯಾಳದ ಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ಆಶೀರ್ವಚನ ನೀಡಿ, ಎಲ್‌ಐಸಿ ಸಂಸ್ಥೆಯ ಮೂಲಕ ಅನೇಕ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತಿದ್ದು, ನಿರುದ್ಯೋಗ ಸಮಸ್ಯೆ ನಿವಾರಣೆಗೆ ಇದು ಸಹಕಾರಿಯಾಗಿದೆ ಎಂದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಲಿಯಾಫಿ ಜಮಖಂಡಿ ಅಧ್ಯಕ್ಷ ಆನಂದ ಹೊಸಕೋಟಿ ಮಾತನಾಡಿದರು. ಮಾಧ್ಯಮ ಸಲಹೆಗಾರ ಅಶೋಕ್ ವಸ್ತ್ರದ, ಕಾರ್ಯಕಾರಿ ಸಮಿತಿ ಅಧ್ಯಕ್ಷ ರತ್ನಾಕರ ಶೆಟ್ಟಿ ಉಪಸ್ಥಿತರಿದ್ದರು. ಲಿಯಾಫಿ ಕಾರ್ಯದರ್ಶಿ ಅಶೋಕ ವಜ್ಜರಮಟ್ಟಿ ವಾರ್ಷಿಕ ವರದಿ ಮಂಡಿಸಿದರು. ಖಜಾಂಚಿ ಶಿವಾನಂದ ಕೆಂಚಪ್ಪನವರ ಲೆಕ್ಕಪತ್ರ ವರದಿ ವಾಚಿಸಿದರು.ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಎಲ್‌ಐಸಿ ಪ್ರತಿನಿಧಿಗಳನ್ನು ಸನ್ಮಾನಿಸಲಾಯಿತು. ಗೀತಾ ಬಾಲಪ್ಪಗೋಳ ಭಕ್ತಿಗೀತೆ ಹಾಡಿದರು. ಮಲ್ಲಿಕಾರ್ಜುನ ಬಟಕುರ್ಕಿ ಸ್ವಾಗತಿಸಿದರು. ಅಪ್ಪಯ್ಯ ಅಂಗಡಿ ಕಾರ್ಯಕ್ರಮ ನಿರೂಪಿಸಿದರು. ಯಲ್ಲಪ್ಪ ಮೇತ್ರಿ ವಂದಿಸಿದರು.

# ಅಶ್ವಿನಿ ಅತ್ಯಾಚಾರ-ಕೊಲೆ ಪ್ರಕರಣ: ಕರ್ತವ್ಯಲೋಪ ಆರೋಪದ ಮೇಲೆ ನಾಲ್ವರು ಪೊಲೀಸರು ಅಮಾನತು

❑ ನೈಜ್ಯ ದೆಸೆ ನ್ಯೂಸ್




ರಾಯಚೂರು: ಸಿರವಾರ ತಾಲೂಕಿನ ಹೊಕ್ರಾಣಿ ಗ್ರಾಮದ ಯುವತಿ ಅಶ್ವಿನಿ ಅತ್ಯಾಚಾರ ಹಾಗೂ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ ಎಸಗಿದ ಆರೋಪದ ಮೇಲೆ ಸಿರವಾರ ಪೊಲೀಸ್ ಠಾಣೆಯ ನಾಲ್ವರು ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.ಸಿರವಾರ ಠಾಣೆಯ ಮುಖ್ಯ ಪೇದೆಗಳಾದ ಭೀಮರಡ್ಡಿ ಹಾಗೂ ವೀರೇಶ ಮತ್ತು ಪೇದೆಗಳಾದ ದೇವರಾಜ ಹಾಗೂ ನಾಗರಾಜ ಅವರನ್ನು ಅಮಾನತು ಮಾಡಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣಾಂಗ್ಶುಗಿರಿ ಆದೇಶ ಹೊರಡಿಸಿದ್ದಾರೆ. ಹೊಕ್ರಾಣಿ ಗ್ರಾಮದ ಅಶ್ವಿನಿ ಬುಧವಾರ ಸಂಜೆ ಬಹಿರ್ದೆಶೆಗೆ ತೆರಳಿ ನಾಪತ್ತೆಯಾಗಿದ್ದಾಳೆ ಎಂದು ಆಕೆಯ ಪಾಲಕರು ಸಿರವಾರ ಪೊಲೀಸ್ ಠಾಣೆಗೆ ಮಾಹಿತಿ ನೀಡಿದ್ದರು. ಬಳಿಕ ಠಾಣೆಗೆ ತೆರಳಿ ದೂರು ದಾಖಲಿಸಲು ಮುಂದಾದರೂ ಪೊಲೀಸರು ಸೂಕ್ತವಾಗಿ ಸ್ಪಂದಿಸದೆ, ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸದೇ ನಿರ್ಲಕ್ಷ್ಯ ತೋರಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು.ಈ ಹಿನ್ನೆಲೆಯಲ್ಲಿ ಅಶ್ವಿನಿಯ ಕುಟುಂಬಸ್ಥರು ಹಾಗೂ ದಲಿತ ಸಂಘಟನೆಗಳ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ, ಸ್ಥಳಕ್ಕೆ ಆಗಮಿಸಿದ್ದ ಬಳ್ಳಾರಿ ಐಜಿಪಿ, ರಾಯಚೂರು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಮುಂದೆ ದೂರು ಸಲ್ಲಿಸಿದ್ದರು.ಕರ್ತವ್ಯದಲ್ಲಿ ನಿರ್ಲಕ್ಷ್ಯ ತೋರಿದ ಪೊಲೀಸ್ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಂಡು ಅಮಾನತು ಮಾಡಬೇಕೆಂದು ಪ್ರತಿಭಟನಾಕಾರರು ಒತ್ತಾಯಿಸಿದ್ದರು. ಇದೀಗ ಕರ್ತವ್ಯಲೋಪದ ಆರೋಪದ ಆಧಾರದ ಮೇಲೆ ನಾಲ್ವರು ಪೊಲೀಸ್ ಸಿಬ್ಬಂದಿಯನ್ನು ಅಮಾನತು ಮಾಡಲಾಗಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101